# ಹಳೆಯ ಒಡಂಬಡಿಕೆಯ ಮುಖ್ಯತ್ವವೇನು?

ಅಧ್ಯಯನ # 11



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 11

## ಹಳೆಯ ಒಡಂಬಡಿಕೆಯ ಮುಖ್ಯತ್ವವೇನು?

<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಈ ದಿನ ನಾವು ಹಳೆಯ ಒಡಂಬಡಿಕೆಯ **ಮುಖ್ಯತ್ವ** ಮತ್ತು ಉದ್ದೇಶವನ್ನು ಕುರಿತು ಸತ್ಯವೇದದಲ್ಲಿ ಅಭ್ಯಾಸ ಮಾಡಲಿದ್ದೇವೆ.

- ಇದು **ಸತ್ಯವೇದದ 3/4 ಭಾಗವನ್ನು** ಒಳಗೊಂಡಿದೆ ಮತ್ತು ಒಟ್ಟು **39** ಪುಸ್ತಕಗಳಿವೆ.
- **ಈ ದಿನಗಳಲ್ಲಿ ಅನೇಕರು** ಹಳೆಯ ಒಡಂಬಡಿಕೆಗೆ **ಮುಖ್ಯತ್ವ ಕೊಡುವುದಿಲ್ಲ.**




ಬೈಬಲ್ ಸೊಸೈಟಿಯು ಸಹ **ಹಳೆಯ** ಒಡಂಬಡಿಕೆಯನ್ನು ಬಿಟ್ಟು, ಹೊಸ ಒಡಂಬಡಿಕೆಯನ್ನು ಮಾತ್ರ ಮುದ್ರಣ ಮಾಡುತ್ತದೆ.

**ಹಳೆಯ ಒಡಂಬಡಿಕೆಯಲ್ಲಿನ ಕೀರ್ತನೆ** ಮತ್ತು ಜ್ಞಾನೋಕ್ತಿಗಳು ಮತ್ತು ಪ್ರಸಂಗಿಯನ್ನು ಮಾತ್ರ ಓದಿ ಬೇರೆ ಎಲ್ಲಾ ಪುಸ್ತಕವನ್ನು ಅಲಕ್ಷ್ಯ ಮಾಡುತ್ತಾರೆ.

**ಅನೇಕರು ಹಳೆಯ ಒಡಂಬಡಿಕೆಯನ್ನು ಇತಿಹಾಸ ಎಂದುಕೊಂಡಿದ್ದಾರೆ –**

ಈಗಾಗಲೇ ಸಂಭವಿಸಿರುವ ಘಟನೆಗಳು

ಇಸ್ರಾಯೇಲ್ಯರು ಮತ್ತು ಅವರ ಅನುಭವಗಳು, ಯುದ್ಧಗಳು, ಪ್ರತ್ಯೇಕ ಜನರ ಬಗ್ಗೆ, ಅವರ ಮಾತುಗಳು, ಐಗುಪ್ತ್ಯದಿಂದ ಕಾನಾನಿಗೆ ಮತ್ತು

ಇನ್ನೂ ಮುಂದೆ ಮಾಡಿದ ಇಸ್ರಾಯೇಲ್ಯರ ಪ್ರಯಾಣದ ಅಧಿಕವಾದ ವಿವರಗಳು........



**ಆದರೆ ಇವೆಲ್ಲಾ ಏಕೆ ದಾಖಲಾಗಿದೆ?**

**ಇದು ಕೇವಲ ಹಳೆ ಇತಿಹಾಸವೇ?**

**– ಇದು ಬರೀ ಸತ್ಯವೇದದ ಇತಿಹಾಸವೇ?**

**ಇದು ಸಾವಿರಾರು ವರ್ಷಗಳ ಹಿಂದೆ ನಡೆದ ವಿಷಯಗಳ ಬಗ್ಗೆ ಇರುವ ವಿವರವಾದ ದಾಖಲೆ ಮಾತ್ರವೇ?**

**ಇದರ ಉದ್ದೇಶವೇನು?**

**ಆದ್ದರಿಂದ ಈ ದಿನಗಳ ಕ್ರೈಸ್ತರಾಗಿರುವ ನಮಗೆ ಹಳೆಯ ಒಡಂಬಡಿಕೆ ಎಷ್ಟು ಮುಖ್ಯವಾಗಿದೆ?**

ಈಗ ಇವುಗಳ **ಉದ್ದೇಶಗಳನ್ನು** ನೋಡೋಣ –

## ಉದ್ದೇಶ # 1

ಇಬ್ರಿಯರಿಗೆ 10:1

“ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜಸ್ವರೂಪವಲ್ಲ..... ”

**ಇದರ ಅರ್ಥವೇನು?**

## “ಛಾ0ಯೆ” ಎಂಬುದರ ಅರ್ಥವೇನು?

## “ಬರಬೇಕಾದ ಮೇಲುಗಳ” ಎಂಬುದರ ಅರ್ಥವೇನು?

ಇಲ್ಲಿ ಅಪ್ೊಸ್ತಲನಾದ ಪೌಲನು “ಬರಬೇಕಾದ ಮೇಲುಗಳ” "**ಛಾ0ಯೆ**" ಯಾಗಿರುವ ಮೋಶೆ0ಯ ಧರ್ಮಶಾಸ್ತ್ರವನ್ನು ಕುರಿತು ಸೂಚಿಸುತ್ತಾನೆ.

**ಬರಬೇಕಾದ ಮೇಲುಗಳು 0ಯಾವಾಗ? –**

**ಹೌದು! 0ಯೇಸುವಿನ ನಂತರ!**

ನಮ್ಮೆಲ್ಲರಿಗೂ ಗೊತ್ತಿರುವ ಹಾಗೆ ದೇವರಿಗೆ ಒಂದು ನಿಶ್ಚಿತವಾದ 0ಯೋಜನೆ ಇದೆ! ಆದರೆ, 0ಯೇಸು ಈ ಭೂಮಿಗೆ ಬರುವುದಕ್ಕೆ ಮುಂಚೆ ಇದು 0ಯಾರಿಗೂ ಸ್ಪಷ್ಟವಾಗಿರಲಿಲ್ಲ ಹಾಗು ಅರ್ಥವಾಗಿರಲಿಲ್ಲ

"ಬರಬೇಕಾದ ಮೇಲುಗಳು" ಎಂಬುದು ಕಲ್ವಾರಿ ಶಿಲುಬೆಯ ಮೇಲಿನ ಆತನ ಮರಣದ ಮೂಲಕ ಪಾಪ ಮತ್ತು ಮರಣದ ಹಿಡಿತದಿಂದ ಮನುಕುಲವನ್ನು ಬಿಡಿಸುವ ಯೇಸುವಿನ ವಿಮೋಚನಾ ಕೆಲಸದಲ್ಲಿ ಕೇಂದ್ರೀಕೃತವಾಗಿರುವ ದೇವರ ರಕ್ಷಣೆಯ ಯೋಜನೆಯನ್ನು ಸೂಚಿಸುತ್ತದೆ.

ಆದ್ದರಿಂದ ದೇವರ ಮಗನಾದ 0ಯೇಸು ಬಂದ ಮೇಲೆ ನೆರವೇರುವ ಈ ದೈವೀಕ ಯೋಜನೆಯನ್ನು (**ಗಲಾತ್ಯದವರಿಗೆ 4:4**) ರಲ್ಲಿ. “**ಛಾ0ಯೆ0ಯಾಗಿ**” 0ಯೇಸು ಬರುವುದಕ್ಕೆ ಮುಂಚೆ ತೋರಿಸಲಾಗಿದೆ.

ಈ "ಛಾಯೆ" ಗಳು ವಾಸ್ತು "ಶಿಲ್ಪಿ0ಯು" ಮನೆ0ಯನ್ನು ಕಟ್ಟಿ ಮುಗಿಸುವುದಕ್ಕಿಂತಲೂ ಮುಂಚೆ ಅದು ಹೇಗಿರುತ್ತದೆಂದು ಮಾಡಿ ತೋರಿಸುವ "ಮಾದರಿ"0ಯಂತೆ ಇದೆ!!



ಸತ್ಯವೇದದ ಭಾಷೆಯಲ್ಲಿ ಇದನ್ನು **("Type")ಟೈಪ್– ಛಾಯೆ** ಎನ್ನುತ್ತಾರೆ. ಇದರ ಗ್ರೀಕ್ ಪದವು "ಟ್ಯೂಪೋಸ್" ಮತ್ತು ಇದರ ನೆರವೇರಿಕೆ ಅಥವಾ **ನಿಜಾಂಶವನ್ನು** **"Antitype"** (ಆ್ಯಂಟಿ ಟೈಪ್)–– ನಿಜಸ್ವರೂಪ ಎಂದು ಕರೆಯುತ್ತಾರೆ.

**ಹಳೆಯ ಒಡಂಬಡಿಕೆ ಪೂರ್ತಿಯಾಗಿ ಛಾಯೆಗಳು ಮತ್ತು ನಿಜಸ್ವರೂಪಗಳೂ ಆಗಿವೆ.**

ಇಲ್ಲಿ ಅಪೋ. ಪೌಲನು **ಇಬ್ರಿಯರಿಗೆ** 10:1 **(ಪೂರ್ತಿಯಾಗಿ ಮತ್ತೆ ಓದಿರಿ)** ಹೇಳುವುದೇನೆಂದರೆ ಪ್ರತಿ ವರ್ಷ ಇಸ್ರಾಯೇಲ್ಯರು ಸಮರ್ಪಿಸುತ್ತಿದ್ದ ಈ ದೋಷಪರಿಹಾರಕ ಯಜ್ಞಗಳು, ಮುಂದೆ ಯೇಸುವಿನ ಮೂಲಕ ನೆರವೇರುವ ಪಾಪದ ನಿಜವಾದ ದೋಷಪರಿಹಾರಕ ಕೆಲಸಕ್ಕೆ ಕೇವಲ ಛಾಯೆಗಳಾಗಿದ್ದವು. ಏಕೆಂದರೆ "ಹೋರಿಗಳ ಮತ್ತು ಹೋತಗಳ ರಕ್ತದಿಂದ" **ಪಾಪಗಳನ್ನು ಪರಿಹಾರ ಮಾಡಲು ಸಾಧ್ಯವಿಲ್ಲವೆಂದು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಇಬ್ರಿಯರಿಗೆ 10:4**

**"ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ."**

ಈಗ ಹಳೆಯ ಒಡಂಬಡಿಕೆಯ ಮುಖ್ಯತ್ವದ **ಎರಡನೆಯ ಉದ್ದೇಶವನ್ನು** ಕುರಿತು ನೋಡೋಣ –

# ಉದ್ದೇಶ # 2

## ರೋಮಾಪುರದವರಿಗೆ 15:4

" ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿತು."

ಆದ್ದರಿಂದ **"ಪೂರ್ವದಲ್ಲಿ"** ಬರೆದಿರುವ ಹಳೆ ಒಡಂಬಡಿಕೆಯ ಎಲ್ಲಾ ವಿಷಯಗಳು "ನಾವು"

– ಸಭೆಯು ಸ್ಥಿರಚಿತ್ತವನ್ನೂ ಆದರಣೆಯನ್ನು ಹೊಂದುವದಕ್ಕಾಗಿ ಕೊಡಲ್ಪಟ್ಟಿದೆ

**ಇದು ಹೇಗೆ ಎಂದು ಯಾರಾದರು ಕೇಳಬಹುದು?**

ಶರೀರದಲ್ಲಿ ಬಲಹೀನತೆ ಮತ್ತು ವ್ಯಾಧಿಗಳು ಹೇಗಿದೆಯೋ ಹಾಗೆಯೇ **ಆತ್ಮೀಕ ಬಲಹೀನತೆ ಮತ್ತು ವ್ಯಾಧಿಗಳಿವೆ.**



ಯಾರಿಗಾದರೂ ನೆಗಡಿಯಿದ್ದರೆ ಅದನ್ನು ಗುಣಪಡಿಸುವುದಕ್ಕೆ ಅವರು "**ಕೋಲ್ಡ್ ಆಕ್ಟ್**" ಅಥವಾ "ಕೋಲ್ಡರಿನ್" ಔಷಧಿಯನ್ನು ಹುಡುಕುತ್ತಾರೆ.




ಹಾಗೆಯೇ ಜ್ವರವಿದ್ದರೆ ಕ್ರೋಸಿನ್, ನೋವಾಲ್ಜಿನ್, ಐಮಾಲ್ ಇತ್ಯಾದಿಗಳು.

ಇವೆಲ್ಲಾ ಔಷಧಿಗಳು ಶಾರೀರಿಕ ರೋಗವನ್ನು ಗುಣಪಡಿಸುತ್ತವೆ, ಅದೇ ರೀತಿ ಆತ್ಮೀಕ ರೋಗ ಗುಣಪಡಿಸಲು ಆತ್ಮೀಕ ಔಷಧಿಗಳು ಬೇಕು.

**ಈಗ ನಾವು ಕೆಲವು ಆತ್ಮೀಕ ಕಾಯಿಲೆಯ ಸ್ಥಿತಿಗಳನ್ನು ನೋಡೋಣ –**

## ಒಬ್ಬರ ತಮ್ಮ ನಂಬಿಕೆಯು.....ಬಲಹೀನವಾಗಿ ದುರ್ಬಲವಾಗಿ ಇದ್ದರೆ ಏನು ಮಾಡಬೇಕು?



ಅವರು ತೆಗೆದುಕೊಳ್ಳಬೇಕಾದ ಆತ್ಮೀಕ ಔಷಧಿ ಯಾವುದೆಂದರೆ –

### ಅಬ್ರಹಾಮನು.

ಆತನು ದೇವರಲ್ಲಿ ಇಟ್ಟಿದ್ದ ಮಹಾನಂಬಿಕೆಯ ನಿಮಿತ್ತ, ದೇವರ ಮಾತಿಗೆ ವಿಧೇಯನಾಗಿ, ತಮ್ಮ ಪ್ರಿಯನಾಗಿರುವ ಮಗನ ಜೊತೆ ಮೂರು ದಿನದ ದೂರದಷ್ಟು ಪ್ರಯಾಣ ಮಾಡಿ ತನ್ನ ಮಗನನ್ನು **ಸರ್ವಾಂಗ ಹೋಮವಾಗಿ** ಅರ್ಪಿಸುವದಕ್ಕೆ ಇಚ್ಚೆಯುಳ್ಳವನಾಗಿದ್ದನು ಎಂಬ ವಿಷಯ ಕುರಿತು ಓದುವಾಗ, ಅದೇ ದೇವರ ಮೇಲೆ ನಮ್ಮ ನಂಬಿಕೆಯು ಹೆಚ್ಚಾಗುತ್ತದೆ! (ಆದಿಕಾಂಡ 22:1-15)

## ಒಬ್ಬರಿಗೆ ದೇವರ ಮೇಲಿನ ಆಸಕ್ತಿಯು ಈ ಲೋಕದಲ್ಲಿರುವ ನಂಬಿಕೆಯಿಲ್ಲದವರ ಮಧ್ಯೆ ಬಾಳುವಾಗ ತಣ್ಣಗಾದರೆ ಏನು ಮಾಡಬೇಕು?

ತೆಗೆದುಕೊಳ್ಳಬೇಕಾದ ಆತ್ಮೀಕ ಔಷಧಿ ಯಾವುದೆಂದರೆ

### ದಾನಿಯೇಲನು.

ಆತನ ಅಧಿಕವಾದ ಆಸಕ್ತಿಯನ್ನು ಕುರಿತು ಓದುವಾಗ, ಮೊದಲು




ಬಾಬೆಲಿನ ಮಧ್ಯದಲ್ಲಿ ನಂತರ ಮೆದೊ ಪರ್ಶಿಯ ಮಧ್ಯದಲ್ಲಿ ಹಾಗೂ ನಂಬಿಕೆಯಿಲ್ಲದವರ ಮಧ್ಯೆ ತನ್ನ ದೇವರನ್ನು ಅರಿಕೆಮಾಡಲು ಹೆದರಲಿಲ್ಲ ಅಥವ ನಾಚಿಕೆಪಡಲಿಲ್ಲ ಎಂಬ ವಿಷಯ ಕುರಿತು ಓದುವಾಗ

ಅದೇ ದೇವರ ಮೇಲೆ ಈ ದಿನ ನಮಗೂ ಆಸಕ್ತಿ ವಹಿಸಲು ಹೊಸ ಶಕ್ತಿ ಬರುತ್ತದೆ!

**ಜೀವನದ ಎಲ್ಲಾ ವಿಧವಾದ ತೊಂದರೆಗಳು ನಮ್ಮ ತಾಳ್ಮೆಯನ್ನು ಕಳೆದುಕೊಳ್ಳುವಂತೆ ಮಾಡಿ, ಗುಣುಗುಟ್ಟುವಂತೆ ಮತ್ತು ದೂರು ಹೇಳುವಂತೆ ಮಾಡಿದಾಗ ಏನು ಮಾಡಬೇಕು?**

ಇದಕ್ಕೆ ಆತ್ಮೀಕ ಔಷಧಿ ಯಾವುದೆಂದರೆ – **ಯೋಬನು.**

ಯೋಬನ ಅನುಭವಗಳು ಮತ್ತು ಕಷ್ಟಗಳನ್ನು ಮತ್ತು ಆತನ ಮಾತುಗಳನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುವಾಗ –



**ಯೋಬನ 1:21**

"ಏನೂ ಇಲ್ಲದವನಾಗಿ ತಾಯಿಯ ಗರ್ಭದಿಂದ ಬಂದೆನು; ಏನೂ ಇಲ್ಲದವನಾಗಿಯೇ ಗತಿಸಿ ಹೋಗುವೆನು; ಯೆಹೋವನೇ ಕೊಟ್ಟನು, ಯೆಹೋವನೇ ತೆಗೆದುಕೊಂಡನು; ಯೆಹೋವನ ನಾಮಕ್ಕೆ ಸ್ತೋತ್ರವಾಗಲಿ ಎಂದು ಹೇಳಿದನು."

ಮತ್ತು ಇನ್ನೊಂದು ವಾಕ್ಯವನ್ನು ಓದುವಾಗ.......

### ಯೋಬನು 2:9,10

“ಹೀಗಿರುವಲ್ಲಿ ಅವನ ಹೆಂಡತಿ ಅವನಿಗೆ - ನಿನ್ನ ಯಥಾರ್ಥತ್ವವನ್ನು ಇನ್ನೂ ಬಿಡಲಿಲ್ಲವೋ? ದೇವರನ್ನು ದೂಷಿಸಿ ಸಾಯಿ ಎಂದು ಹೇಳಿದಳು ಆಗ ಯೋಬನು ಆಕೆಗೆ - ಮೂರ್ಖಳು ಮಾತಾಡಿದಂತೆ ನೀನು ಮಾತಾಡುತ್ತೀ; ದೇವರ ಹಸ್ತದಿಂದ ನಾವು ಒಳ್ಳೇದನ್ನು ಹೊಂದುತ್ತೇವಷ್ಟೆ; ಕೆಟ್ಟದ್ದನ್ನು ಹೊಂದಬಾರದೋ ಎಂದು ಹೇಳಿದನು. ಈ ಸಂದರ್ಭದಲ್ಲಿಯೂ ಪಾಪದ ಮಾತೊಂದೂ ಅವನ ತುಟಿಗಳಿಂದ ಹೊರಡಲಿಲ್ಲ”

.....ಹೌದು ! ನಮ್ಮ **ತೊಂದರೆಗಳು** ಮತ್ತು **ಕಷ್ಟಗಳನ್ನು** ಯೋಬನಿಗೆ ಹೋಲಿಸಿದಾಗ ಅದು ಏನೂ ಇಲ್ಲ !

ಆತನ ನಂಬಿಗಸ್ತಿಕೆಯ ಮಾತುಗಳು ಇಂದು **ಅದೇ** ದೇವರ ಮೇಲೆ **ತಾಳ್ಮೆಯಿಂದಿರಲು** ನಮಗೆ ಬಲವನ್ನು ಕೊಡುತ್ತದೆ. ಇದೇ ರೀತಿ ಆತ್ಮೀಕ ಔಷಧಿಗಳನ್ನು ಹೇಳುತ್ತಲೇ ಹೋಗಬಹುದು....

**ನೋಹನು, ಮೋಶೆ, ಯೋಸೇಫನು, ದಾವೀದನು......**

ಇವರೆಲ್ಲರ ಅನುಭವಗಳು ಮತ್ತು ಜೀವನದ ಕಥೆಗಳು ಇಂದು "ನಮಗೆ" (ಸಭೆಗೆ) ಉತ್ಸಾಹವನ್ನು ಮತ್ತು ಆದರಣೆಯನ್ನು ಕೊಡುತ್ತದೆ !

ಈಗ ನಾವು ಹಳೆಯ ಒಡಂಬಡಿಕೆಯ ಮುಖ್ಯತ್ವದ **ಮೂರನೆ ಉದ್ದೇಶವನ್ನು** ಕುರಿತು ನೋಡೋಣ –

## ಉದ್ದೇಶ # 3

### 1 ಕೊರಿಂಥದವರಿಗೆ 10:11

“ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿದೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ.”

ಇದರ ಅರ್ಥವೇನೆಂದರೆ ಹಳೆಯ ಒಡಂಬಡಿಕೆಯ ಕಾಲದಲ್ಲಿ ನಡೆದ ಎಲ್ಲಾ ಸಂಗತಿಗಳು

**ಸಭೆಯಾದ** "ನಮಗೆ" **......ನಿದರ್ಶನ** ರೂಪವಾಗಿದೆ!

**“ನಿದರ್ಶನ” ಗಳೆಂದರೇನು?**

ನಿದರ್ಶನಗಳೆಂದರೆ ಜನರ ಜೀವನ ಕಥೆಗಳನ್ನು **ಮಾತನಾಡುವುದಕ್ಕೆ ಅಭಿನಯಿಸಲ್ಪಟ್ಟ ದೃಷ್ಟಾಂತಗಳು** ಮತ್ತು ಇಲ್ಲಿ ಹಳೆಯ ಒಡಂಬಡಿಕೆಯ **ಕಥಾಪಾತ್ರವನ್ನು** ಸೂಚಿಸುತ್ತದೆ.

## "ನಿದರ್ಶನ"ದ ನಿಖರವಾದ ಅರ್ಥವೇನು?

ಇದನ್ನು ಅತ್ಯುತ್ತಮವಾಗಿ ಅರ್ಥಮಾಡಿಕೊಳ್ಳಲು ಹಳೆಯ ಒಡಂಬಡಿಕೆಯ ಒಂದು ನಿದರ್ಶನವನ್ನು ಅಭ್ಯಾಸಕ್ಕಾಗಿ ತೆಗೆದುಕೊಳ್ಳೋಣ –

ಕೆಳಗೆ ದಾಖಲಾಗಿರುವ ವಿಷಯವನ್ನು ನಾವು ಅಭ್ಯಾಸ ಮಾಡೋಣ –

### ಆದಿಕಾಂಡ 24 : 1-67

**(ಪೂರ್ತಿಯಾಗಿ ಓದಿ)**

ಈ ಕಥೆಯಲ್ಲಿ ಅಬ್ರಹಾಮನು ತನ್ನ ಪ್ರಿಯ ಮಗನಾದ ಇಸಾಕನಿಗೆ "ಮದಲಗಿತ್ತಿಯನ್ನು" ಹುಡುಕುವದಕ್ಕಾಗಿ ತನ್ನ ಸೇವಕನನ್ನು ಕಳುಹಿಸುತ್ತಾನೆ.

ಮೊದಲು ಸತ್ಯವೇದದಲ್ಲಿರುವ ಕಥೆಯನ್ನು ಅಭ್ಯಾಸ ಮಾಡೋಣ –

ಆದ್ದರಿಂದ ಕೆಳಗಿನ ವಾಕ್ಯವನ್ನು ನಾವು ಓದುತ್ತೇವೆ –

### ಆದಿಕಾಂಡ 24 : 1,2


"ಅಬ್ರಹಾಮನು ಬಹುದಿನದ ವೃದ್ಧನಾದನು. ಯೆಹೋವನು ಅವನನ್ನು ಸಕಲ ವಿಷಯಗಳಲ್ಲಿ ಅಭಿವೃದ್ಧಿಪಡಿಸಿದ್ದನು. ಹೀಗಿರಲು ಅವನು ತನಗಿದ್ದ ಆಸ್ತಿಯ ಮೇಲೆ ಆಡಳಿತ ಮಾಡುತ್ತಿದ್ದ ಹಿರೀ ಸೇವಕನಿಗೆ."

ಅಬ್ರಹಾಮನು ಮುದಿ ವಯಸ್ಸಿನಲ್ಲಿ, ತನ್ನ "ಒಬ್ಬನೇ" ಮಗನಾದ ಇಸಾಕನಿಗೆ ಮದಲಗಿತ್ತಿಯನ್ನು ನೋಡಲು ಯೋಜನೆ ಮಾಡುತ್ತಾನೆ.

ಆದ್ದರಿಂದ ನಾವು ಹೀಗೆ ಓದುತ್ತೇವೆ.......

### ಆದಿಕಾಂಡ 24 : 3,4

" ನಾನು ವಾಸವಾಗಿರುವ ಕಾನಾನ್ಯರಲ್ಲಿ ನೀನು ನನ್ನ ಮಗನಿಗೋಸ್ಕರ ಹೆಣ್ಣನ್ನು ತೆಗೆದುಕೊಳ್ಳದೆ ನನ್ನ ಸ್ವದೇಶಕ್ಕೂ ನನ್ನ ಬಂಧುಗಳ ಬಳಿಗೂ ಹೋಗಿ ಅವರಲ್ಲಿ ನನ್ನ



ಮಗನಾದ ಇಸಾಕನಿಗೆ ಹೆಣ್ಣನ್ನು ತೆಗೆದುಕೊಳ್ಳಬೇಕು. ಹಾಗೆ ತೆಗೆದುಕೊಳ್ಳುತ್ತೇನೆಂಬದಕ್ಕೆ ನೀನು ನನ್ನ ತೊಡೆಯ ಕೆಳಗೆ ಕೈಯಿಟ್ಟು ಭೂಲೋಕಪರಲೋಕಗಳ ದೇವರಾಗಿರುವ ಯೆಹೋವನ ಮೇಲೆ ಪ್ರಮಾಣಮಾಡಬೇಕು ಎಂದು ಹೇಳಿದನು."

ಆತನು ತನ್ನ ಪ್ರಧಾನ ಸೇವಕನಾದ **ಎಲೀಯೆಜರನಿಗೆ** ಆದೇಶ ನೀಡಿ

(**ಆದಿಕಾಂಡ 15:2** "ಅದಕ್ಕೆ ಅಬ್ರಹಾಮನು - ಕರ್ತನಾದ ಯೆಹೋವನೇ, ನನಗೆ ಏನು ಕೊಟ್ಟರೇನು? ನಾನು ಸಂತಾನವಿಲ್ಲದವನಾಗಿ ಹೋಗುವೆನಾದದರಿಂದ ನನ್ನ ಆಸ್ತಿಯೆಲ್ಲಾ ದಮಸ್ಕದ ಎಲೀಯೆಜರನ ಪಾಲಾಗುವದಲ್ಲಾ ಅಂದನು")

- **ಪ್ರಮಾಣಮಾಡಿಸಿಕೊಳ್ಳುವುದೇನೆಂದರೆ** ಮದಲಗಿತ್ತಿಯನ್ನು "ನಾನು ವಾಸವಾಗಿರುವ ಕಾನಾನ್ಯರಲ್ಲಿ"
- ತೆಗೆದುಕೊಳ್ಳದೆ "ನನ್ನ ಸ್ವದೇಶಕ್ಕೂ ನನ್ನ ಬಂಧುಗಳ ಬಳಿಗೂ ಹೋಗು."

ಇದು **ದೂರ ದೇಶವನ್ನು** ಸೂಚಿಸುತ್ತದೆ.

ನಂತರ ನಾವು ಏನು ಓದುತ್ತೇವೆ.

## ಆದಿಕಾಂಡ 24:10

"ತರುವಾಯ ಆ ಸೇವಕನು ತನ್ನ ದಣಿಯ ಒಂಟೆಗಳಲ್ಲಿ ಹತ್ತು ಒಂಟೆಗಳನ್ನು ಸಿದ್ಧಮಾಡಿ ದಣಿಯ ಆಸ್ತಿಯಿಂದ ಶ್ರೇಷ್ಠವಾದ ಒಡವೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಹೊರಟು ಎರಡು ನದಿಗಳ ಮಧ್ಯದಲ್ಲಿರುವ ಅರಾಮ್ ಸೀಮೆಗೆ ಬಂದು ನಾಹೋರನು ವಾಸಿಸಿದ ಊರನ್ನು ಮುಟ್ಟಿದನು"



ಎಲೀಯೆಜರನು **ಹತ್ತು ಒಂಟೆಗಳನ್ನು** ಸಿದ್ಧಮಾಡಿ "ಶ್ರೇಷ್ಠವಾದ ಒಡವೆಗಳನ್ನು" ತೆಗೆದುಕೊಂಡು ನಾಹೋರನು ವಾಸಿಸುವ ಊರಾದ ಮೆಸಪೊಟೇಮಿಯಾಗೆ ಪ್ರಯಾಣ ಮಾಡಿದನು.

ನಂತರ ನಾವು ಏನು ಓದುತ್ತೇವೆ......



## ಆದಿಕಾಂಡ 24:11

“ ಸಾಯಂಕಾಲದಲ್ಲಿ ಸ್ತ್ರೀಯರು ನೀರು ತರುವದಕ್ಕೆ ಹೋಗುವಾಗ ಅವನು ಊರಿನ ಹೊರಗಡೆ ಬಾವಿಯ ಹತ್ತಿರ ಒಂಟೆಗಳನ್ನು ಮಲಗಿಸಿ ”

ಹೌದು! ಆತನ ಪ್ರಯಾಣ ಮುಗಿದಾಗ ಅವನು ಸಾಯಂಕಾಲ ಸ್ತ್ರೀಯರು ನೀರು ತರುವ "ಬಾವಿ"ಯ ಹತ್ತಿರ ಬಂದು ಸೇರುತ್ತಾನೆ.

ಅಲ್ಲಿ ಎಲೀಯೆಜರನು ಕೆಳಗಿನ ವಾಕ್ಯದಲ್ಲಿರುವಂತೆ ಪ್ರಾರ್ಥಿಸಲು ಆರಂಭಿಸುತ್ತಾನೆ ನಂತರ ನಾವು ಹೀಗೆ ಓದುತ್ತೇವೆ......




## ಆದಿಕಾಂಡ 24:12-14

“ ನನ್ನ ದಣಿಯಾದ ಅಬ್ರಹಾಮನ ದೇವರಾಗಿರುವ ಯೆಹೋವನೇ, ಈ ಹೊತ್ತು ನಾನು ಬಂದ ಕಾರ್ಯವನ್ನು ನೀನು ಅನುಕೂಲ ಪಡಿಸಿ ನನ್ನ ದಣಿಯಾದ ಅಬ್ರಹಾಮನಿಗೆ ಉಪಕಾರಮಾಡಬೇಕೆಂದು ಬೇಡುತ್ತೇನೆ. ಇಗೋ, ನೀರಿನ ಬುಗ್ಗೆಯ ಬಳಿಯಲ್ಲಿ ನಿಂತಿದ್ದೇನೆ; ಈ ಊರಿನ ಹೆಣ್ಣುಮಕ್ಕಳು ನೀರಿಗೆ ಬರುತ್ತಾರೆ. ನಾನು ಯಾವ ಹುಡುಗಿಗೆ - ನೀನು ದಯವಿಟ್ಟು ನಿನ್ನ ಕೊಡವನ್ನು ಇಳಿಸಿ ನನಗೆ ಕುಡಿಯುವದಕ್ಕೆ ಕೊಡು ಎಂದು ಹೇಳುವಾಗ - ನೀನು ಕುಡಿಯಬಹುದು, ಮತ್ತು ನಿನ್ನ ಒಂಟೆಗಳಿಗೂ ನೀರು ಕೊಡುತ್ತೇನೆ ಅನ್ನುವವಳೋ, ಅವಳೇ ನಿನ್ನ ದಾಸನಾದ ಇಸಾಕನಿಗೆ ನೀನು ನೇಮಿಸಿರುವ ಕನ್ಯೆಯಾಗಲಿ. ನನ್ನ ದಣಿಯ ಮೇಲೆ ನಿನ್ನ ದಯವದೆ ಎಂದು ಇದರಿಂದ ನನಗೆ ಗೊತ್ತಾಗುವದು ಅಂದನು. ”

ಹೌದು! ಎಲೀಯೆಜರನು ಅಬ್ರಹಾಮನ ದೇವರಿಗೆ **ಮಾರ್ಗ** ತೋರಿಸುವಂತೆ ಪ್ರಾರ್ಥಿಸುತ್ತಾನೆ ಮತ್ತು ದೇವರು ನೇಮಿಸಿರುವ ಕನ್ಯೆಯನ್ನು ಸರಿಯಾಗಿ ಮತ್ತು ಖಚಿತವಾಗಿ **ಗುರುತಿಸಲು** ಒಂದು **"ಗುರುತನ್ನು"** ಸಹ ಹೇಳುತ್ತಾನೆ –

" ನೀನು ಕುಡಿಯಬಹುದು , ಮತ್ತು ನಿನ್ನ ಒಂಟೆಗಳಿಗೂ ನೀರು ಕೊಡುತ್ತೇನೆ... "



ನಂತರ ಏನಾಗುತ್ತದೆ? ಮುಂದಿನ ವಾಕ್ಯವನ್ನು ಓದಿ ನೋಡೋಣ.......

## ಆದಿಕಾಂಡ 24:15

" ಅವನು ಹೀಗೆ ಅಂದುಕೊಳ್ಳುತ್ತಿರುವಾಗಲೇ ಅಬ್ರಹಾಮನ ತಮ್ಮನಾದ ನಾಹೋರನ ಹೆಂಡತಿಯಾಗಿರುವ ಮಿಲ್ಕಳ ಮಗನಾದ ಬೆತೂವೇಲನಿಗೆ ಹುಟ್ಟಿದ ರೆಬೆಕ್ಕಳು ಹೆಗಲಿನ ಮೇಲೆ ಕೊಡವನ್ನಿಟ್ಟುಕೊಂಡು ಊರ ಹೊರಗೆ ಬರುವದನ್ನು ಕಂಡನು "

ಹೀಗೆ "ಅಂದು ಕೊಳ್ಳುತ್ತಿರುವಾಗಲೇ" **ರೆಬೆಕ್ಕಳು** ಬಾವಿಯ ಬಳಿ ನೀರು ಸೇದಲು ಬರುತ್ತಾಳೆ.

ನಂತರ ನಾವು ಹೀಗೆ ಓದುತ್ತೇವೆ –

## ಆದಿಕಾಂಡ 24:16

" ಆ ಹುಡುಗಿ ಬಹು ಸುಂದರಿಯಾಗಿಯೂ ಇನ್ನೂ ಮದುವೆಯಿಲ್ಲದ ಕನ್ನಿಕೆಯಾಗಿಯೂ ಇದ್ದಳು"

ಹೌದು! ಅವಳು ಬಹಳ ಸುಂದರವಾಗಿದ್ದಳು ಮತ್ತು ಕನ್ನಿಕೆಯಾಗಿದ್ದಳು !

ನಂತರ ಹೀಗೆ ಓದಿ ಓದುತ್ತೇವೆ–

## ಆದಿಕಾಂಡ 24:17-19

**“ಆಕೆ ಬುಗ್ಗೆಯ ಬಳಿಗೆ ಇಳಿದು ಕೊಡದಲ್ಲಿ ನೀರು ತುಂಬಿಕೊಂಡು ಮೇಲಕ್ಕೆ ಬಂದಾಗ ಆ ಸೇವಕನು ಓಡಿಬಂದು ಎದುರುಗೊಂಡು – ಅಮ್ಮಾ ದಯಮಾಡಿ ನಿನ್ನ ಕೊಡದಿಂದ ನನಗೆ ಸ್ವಲ್ಪ ನೀರನ್ನು ಕುಡಿಯುವದಕ್ಕೆ ಕೊಡು ಎಂದು ಕೇಳಿಕೊಳ್ಳಲು ಆಕೆ ಕುಡಿಯಪ್ಪಾ ಎಂದು ಹೇಳಿ ತತ್‌ಕ್ಷಣವೇ ಕೊಡವನ್ನು ತನ್ನ ಕೈಯ ಮೇಲೆ ಇಳಿಸಿ ಕುಡಿಯಕೊಟ್ಟಳು. ನೀರುಕುಡಿಸಿದ ಮೇಲೆ – ನಾನು ನಿನ್ನ ಒಂಟೆಗಳಿಗೂ ಬೇಕಾದಷ್ಟು ನೀರು ತಂದುಕೊಡುತ್ತೇನೆ ಎಂದು ಹೇಳಿ.”**

ಹೌದು! ಎಲೀಜರನು ಆಕೆಯ ಬಳಿ ಕುಡಿಯಲು ನೀರು ಕೇಳಿದಾಗ ಆಕೆಯು ತತ್ ಕ್ಷಣವೇ ಹೀಗೆ ಹೇಳುತ್ತಾಳೆ –

**ಕುಡಿಯಪ್ಪಾ**



.....ಮತ್ತು ಒಂಟೆಗಳನ್ನು ನೋಡಿ ಅವುಗಳಿಗೂ ಸಹ ಕುಡಿಯಲು ನೀರು ಕೊಡುತ್ತಾಳೆ!

**ಎಷ್ಟು ಪರಿಪೂರ್ಣವಾಗಿ ಮತ್ತು ಸರಿಯಾಗಿ ಎಲೀಜರನು ಸರಿಯಾದ ಹುಡುಗಿಯ ಗುರುತನ್ನು ದೇವರ ಬಳಿ ಕೇಳಿಕೊಂಡಂತೆ ನೆರವೇರುತ್ತದೆ !**

## ಆದಿಕಾಂಡ 24:20,21

**"....ಕೊಡದಲ್ಲಿದ್ದ ನೀರನ್ನು ದೋಣಿಯೊಳಗೆ ಹೊಯಿದು ತಿರಿಗಿ ತರುವದಕ್ಕೆ ಬಾವಿಗೆ ತ್ವರೆಯಾಗಿ ಹೋದಳು. ಹೀಗೆ ಅವನ ಎಲ್ಲಾ ಒಂಟೆಗಳಿಗೂ ತಂದು ಕೊಟ್ಟಳು ಅಷ್ಟರಲ್ಲಿ ಆ ಮನುಷ್ಯನು ಏನೂ ಮಾತಾಡದೆ ಆಕೆಯನ್ನು ದೃಷ್ಟಿಸಿನೋಡುತ್ತಾ - ಯೆಹೋವನು ನನ್ನ ಪ್ರಯಾಣವನ್ನು ಸಫಲ ಮಾಡಿದನೋ ಇಲ್ಲವೋ ಎಂದು ತಿಳಿಯುವದಕ್ಕಾಗಿ ಕಾದುಕೊಂಡಿದ್ದನು."**

ಆಕೆಯು 10 ಒಂಟೆಗಳಿಗೆ ನೀರು ಕುಡಿಸುವ ಬಹು ಕಠಿಣ ಕೆಲಸ ಮಾಡಲು ಹೊರಡುತ್ತಾಳೆ !

(ಪ್ರತಿ ಒಂಟೆಗೂ ಸುಮಾರು 10 ಕೊಡ ನೀರು ಬೇಕೆಂದುಕೊಳ್ಳಿರಿ ಒಟ್ಟು ಸುಮಾರು 100 ಕೊಡಗಳು !)



ಮತ್ತು ಈ ಎಲ್ಲಾ ಸಮಯಗಳಲ್ಲಿ ಎಲೀಜರನು **ಆಶ್ಚರ್ಯದಿಂದ** ಗಮನಿಸುತ್ತಿದ್ದನು ಮತ್ತು ದೇವರು ಆತನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ವಂದನೆ ಸಲ್ಲಿಸುತ್ತಿದ್ದನು! ನಂತರ ನಾವು ಹೀಗೆ ಓದುತ್ತೇವೆ

## ಆದಿಕಾಂಡ 24:22

"ಒಂಟೆಗಳು ಕುಡಿದನಂತರ ಅವನು ಆಕೆಯ ಮೂಗಿಗೆ ಅರ್ಧ ತೊಲೆಯ ತೂಕವುಳ್ಳ ಒಂದು ಚಿನ್ನದ ಮೂಗುತಿಯನ್ನೂ ಆಕೆಯ ಕೈಗಳಿಗೆ ಹತ್ತು ತೊಲೆಯ ತೂಕವುಳ್ಳ ಎರಡು ಚಿನ್ನದ ಬಳೆಗಳನ್ನೂ ಇಟ್ಟು"



ಇದರ ನಂತರ, ಎಲೀಜರನು ಆಕೆಗೆ **ಉಡುಗೊರೆಯಾಗಿ** –

- ಅರ್ಧ ತೊಲೆಯ ತೂಕವುಳ್ಳ "ಒಂದು ಚಿನ್ನದ ಮೂಗುತಿ" ಮತ್ತು
- 10 ತೊಲೆಯ ತೂಕವುಳ್ಳ "ಎರಡು ಚಿನ್ನದ ಬಳೆಗಳನ್ನು" ಕೊಟ್ಟನು!

ಈಗ ರೆಬೆಕ್ಕಳಿಗೆ ಈ ದೊಡ್ಡ ಉಡುಗೊರೆಗಳನ್ನು ಪಡೆದುಕೊಂಡು ಎಷ್ಟು **ಗಾಬರಿ** ಮತ್ತು **ಆಶ್ಚರ್ಯವಾಗಿರಬಹುದೆಂದು** ನೀವು ಊಹಿಸಬಹುದು!!

ಅದೂ ಬಾವಿಯ ಹತ್ತಿರ ಕೇವಲ 10 ಒಂಟೆಗಳಿಗೆ ನೀರು ಕುಡಿಸಿದ್ದಕ್ಕಾಗಿ! ಓ!

**ಆಕೆಯು ಬಹಳ ಆಶ್ಚರ್ಯಗೊಂಡಳು!**

ನಂತರ ನಾವು ಹೀಗೆ ಓದುತ್ತೇವೆ–

## ಆದಿಕಾಂಡ 24:23

"ನೀನು ಯಾರ ಮಗಳು? ದಯವಿಟ್ಟು ನನಗೆ ಹೇಳು. ನಿನ್ನ ತಂದೆಯ ಮನೆಯಲ್ಲಿ ನಾವು ಇಳುಕೊಳ್ಳುವದಕ್ಕೆ ಸ್ಥಳವಿದೆಯೋ ಎಂದು ಕೇಳಲು ಆಕೆ ಅವನಿಗೆ"

ಹೌದು ! ನಂತರ ಎಲೀಜರನು ಆಕೆಯ ಕುಟುಂಬದ ಹಿನ್ನಲೆಯನ್ನು ಕುರಿತು ವಿಚಾರಿಸುತ್ತಾನೆ ಮತ್ತು ಆಕೆಯ ಮನೆಯಲ್ಲಿ ಇಳುಕೊಳ್ಳಬಹುದೇ ಎಂದು ಕೇಳುತ್ತಾನೆ ಮತ್ತು ಆಕೆಯು ಹೀಗೆ ಉತ್ತರಿಸುತ್ತಾಳೆ –

**ಆದಿಕಾಂಡ 24:24** ➔ “ ನಾನು ನಾಹೋರನಿಗೆ ಮಿಲ್ಕಳಲ್ಲಿ ಹುಟ್ಟಿದ ಬೆತೂವೇಲನ ಮಗಳು ಎಂದು ಉತ್ತರ ಕೊಟ್ಟು”

**ಆಕೆಯು ಅಬ್ರಹಾಮನ ಹಿರಿಯ ಸಹೋದರನಾದ ನಾಹೋರನ ಮೊಮ್ಮಗಳು!**

ಮತ್ತು ರೆಬೆಕ್ಕಳು ಹೀಗೆ ಉತ್ತರಿಸುತ್ತಾಳೆ –

**ಆದಿಕಾಂಡ 24:25**

“ ಹುಲ್ಲೂ ಮೇವೂ ನಮ್ಮಲ್ಲಿ ಬಹಳ ಉಂಟು, ಮತ್ತು ಇಳುಕೊಳ್ಳುವದಕ್ಕೆ ಸ್ಥಳವದೆ ಅಂದಳು.”

ನಂತರ ಆಕೆಯು ಎಲೀಜರನನ್ನು ಆ ರಾತ್ರಿ ಇಳುಕೊಳ್ಳಲು ಆಹ್ವಾನಿಸುತ್ತಾಳೆ ಮತ್ತು ಒಂಟೆಗಳಿಗೆ ಇಳುಕೊಳ್ಳಲು ಜಾಗ ಮತ್ತು ಆಹಾರ ಕೂಡ ಇದೆ ಎಂದು ಹೇಳಿ ಆತನನ್ನು ಆಹ್ವಾನಿಸಿದ ನಂತರ, ಆಕೆಯು **ಉತ್ತೇಜಿತಳಾಗಿ** ತನ್ನ ಕುಟುಂಬದವರಿಗೆ ಈ ವಿಷಯ ತಿಳಿಸಲು ಮನೆಗೆ ಓಡುತ್ತಾಳೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಆದಿಕಾಂಡ 24:28-31**

“ ಆ ಹುಡುಗಿ ಓಡಿಹೋಗಿ ನಡೆದ ಸಂಗತಿಯನ್ನು ತಾಯಿಯ ಮನೆಯಲ್ಲಿದ್ದವರೆಲ್ಲರಿಗೆ ತಿಳಿಸಿದಳು. ರೆಬೆಕ್ಕಳಿಗೆ ಲಾಬಾನನೆಂಬ ಅಣ್ಣನಿದ್ದನು. ಅವನೂ ತನ್ನ ತಂಗಿಯ ಮೇಲೆ ಇದ್ದ ಮೂಗುತಿಯನ್ನೂ ಬಳೆಗಳನ್ನೂ ನೋಡಿ ಆ ಮನುಷ್ಯನು ನನ್ನ ಸಂಗಡ ಹೀಗೆ ಹೀಗೆ ಮಾತಾಡಿದನೆಂದು ತಂಗಿ ಹೇಳಿದ ಮಾತನ್ನು ಕೇಳಿ ಬುಗ್ಗೆಯ ಹತ್ತಿರ ಒಂಟೆಗಳ ಬಳಿಯಲ್ಲಿ ನಿಂತಿದ್ದ ಆ ಮನುಷ್ಯನ ಬಳಿಗೆ ಓಡಿಬಂದನು. ಬಂದಾಗ ಅವನಿಗೆ – ಯೆಹೋವನ ದಯೆಯನ್ನು ಹೊಂದಿದವನೇ, ಒಳಕ್ಕೆ ಬಾ; ಯಾಕೆ ಹೊರಗೆ ನಿಂತಿರುತ್ತೀ? ನಿನಗೋಸ್ಕರ ನನ್ನ ಮನೆಯನ್ನೂ ಒಂಟೆಗಳಿಗೆ ಸ್ಥಳವನ್ನೂ ಸಿದ್ಧಮಾಡಿದ್ದೇನೆ ಎಂದು ಹೇಳಿದನು.”

ಆಕೆಯು ಮನೆಗೆ ಓಡಿ ಬಂದು ತನ್ನ ತಂದೆ ಮತ್ತು ಹಿರಿಯ ಸಹೋದರನಾದ ಲಾಬಾನನಿಗೆ ವಿಷಯ ತಿಳಿಸುತ್ತಾಳೆ ತತ್ಕ್ಷಣವೇ ಅವರು "ಓಡಿ ಬಂದು" ಎಲೀಜರನನ್ನು ಮನೆಗೆ ಆಹ್ವಾನಿಸುತ್ತಾರೆ.

ಏಕೆಂದರೆ ಪ್ರತಿದಿನ ಯಾರಾದರು ಇಷ್ಟು **ಬೆಲೆಯುಳ್ಳ** ಮತ್ತು ಅಪಾರವಾದ ಉಡುಗೊರೆಯನ್ನು ಬಾವಿಯ ಹತ್ತಿರ ಪಡೆದುಕೊಳ್ಳುವುದಿಲ್ಲ!

ಇವೆಲ್ಲಾ ಆದ ನಂತರ, ಎಲೀಜರನು ತನ್ನ ಬಗ್ಗೆ ಮತ್ತು ತಾನು ಬಂದ ಉದ್ದೇಶದ ಬಗ್ಗೆ ವಿವರಿಸುತ್ತಾನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಆದಿಕಾಂಡ 24:34

“ಅವನು ಹೇಳಿದ್ದೇನೆಂದರೆ – ನಾನು ಅಬ್ರಹಾಮನ ಸೇವಕನು.”

ಅವನು ಹೇಳಿದ್ದೇನೆಂದರೆ – ನಾನು ಅಬ್ರಹಾಮನ ಸೇವಕನು" ಹೌದು!

ಎಲೀಜರನು ತನ್ನ ಪರಿಚಯವನ್ನು ಅಬ್ರಹಾಮನ ಸೇವಕನೆಂದು ಹೇಳಿ, **ಆತನು ಮಾಡಿದ ಪ್ರಯಾಣದ ವಿವರಣೆ ಕೊಡುವುದನ್ನು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಆದಿಕಾಂಡ 24:35-48

“ಯೆಹೋವನು ನನ್ನ ದಣಿಯನ್ನು ಬಹಳವಾಗಿ ಅಭಿವೃದ್ಧಿಪಡಿಸಿ ಅವನಿಗೆ ಕುರಿದನಗಳನ್ನೂ ಬೆಳ್ಳಿ ಬಂಗಾರವನ್ನೂ ದಾಸದಾಸಿಯರನ್ನೂ ಒಂಟೆಗಳನ್ನೂ ಕತ್ತೆಗಳನ್ನೂ ಕೊಟ್ಟದ್ದರಿಂದ ಅವನು ಧನವಂತನಾದನು. ನನ್ನ ದಣಿಯ ಪತ್ನಿಯಾದ ಸಾರಳು ವೃದ್ಧಾಪ್ಯದಲ್ಲಿ ಅವನಿಗೆ ಮಗನನ್ನು ಹೆತ್ತಳು; ಆ ಮಗನಿಗೆ ನನ್ನ ದಣಿಯು ತನಗಿರುವದನ್ನೆಲ್ಲಾ ಕೊಟ್ಟಿದ್ದಾನೆ.

ಇದಲ್ಲದೆ ನನ್ನ ದಣಿಯು ನನಗೆ – ನಾನು ವಾಸವಾಗಿರುವ ಕಾನಾನ್ ದೇಶದವರಿಂದ ನನ್ನ ಮಗನಿಗೆ ಹೆಣ್ಣನ್ನು ತೆಗೆದುಕೊಳ್ಳದೆ ನನ್ನ ತಂದೆಯ ಮನೆಗೂ ನನ್ನ ಬಂಧುಗಳ ಬಳಿಗೂ ಹೋಗಿ ಅವರಲ್ಲೇ ಹೆಣ್ಣನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನಿಂದ ಪ್ರಮಾಣ ಮಾಡಿಸಿದನು. ನಾನು ಅವನಿಗೆ – ಒಂದು ವೇಳೆ ನನ್ನ ಹಿಂದೆ ಬರುವದಕ್ಕೆ ಆ ಕನ್ಯೆಗೆ ಮನಸ್ಸಿಲ್ಲದೆ ಹೋದೀತು ಎಂದು ಹೇಳಲು ಅವನು ನನಗೆ – ನಾನು ಯೆಹೋವನಿಗೆ ನಡೆದುಕೊಳ್ಳುತ್ತೇನಲ್ಲಾ; ಆತನು ತನ್ನ ದೂತನನ್ನು ನಿನ್ನೊಂದಿಗೆ ಕಳುಹಿಸಿ ನೀನು ನನ್ನ ತಂದೆಯ ಮನೆತನಕ್ಕೆ ಸೇರಿರುವ ಬಂಧುಗಳಲ್ಲಿ ನನ್ನ ಮಗನಿಗೆ ಹೆಣ್ಣು ತೆಗೆದುಕೊಳ್ಳುವಂತೆ ಅನುಕೂಲಮಾಡುವನು. ಆ ಮೇಲೆ ನಾನು ಮಾಡಿಸಿದ ಪ್ರಮಾಣದಿಂದ ನೀನು ಬಿಡುಗಡೆಯಾಗಿರುವಿ. ನೀನು ನನ್ನ ಜನರ ಬಳಿಗೆ ಹೋದಾಗ ಅವರು ಹೆಣ್ಣನ್ನು ಕೊಡದಿದ್ದರೆ ನಾನು ಮಾಡಿಸಿದ

ಪ್ರಮಾಣದಿಂದ ನೀನು ಬಿಡುಗಡೆಯಾಗಿರುವಿ ಎಂದು ಹೇಳಿದನು. ನಾನು ಈ ಹೊತ್ತು ಈ ಊರಿನ ಬುಗ್ಗೆಯ ಬಳಿಗೆ ಬಂದಾಗ - ನನ್ನ ದಣಿಯಾದ ಅಬ್ರಹಾಮನ ದೇವರಾಗಿರುವ ಯೆಹೋವನೇ, ನೀರಿನ ಬುಗ್ಗೆಯ ಬಳಿಯಲ್ಲಿ ನಿಂತಿದ್ದೇನಷ್ಟೆ; ನೀನು ನನ್ನ ಪ್ರಯಾಣವನ್ನು ಸಫಲಮಾಡಿದ್ದಾದರೆ ನೀರಿಗೆ ಬರುವ ಯಾವ ಹುಡುಗಿಗೆ - ನೀನು ದಯವಿಟ್ಟು ನಿನ್ನ ಕೊಡದಿಂದ ನನಗೆ ಸ್ವಲ್ಪ ನೀರನ್ನು ಕುಡಿಯುವದಕ್ಕೆ ಕೊಡಮ್ಮಾ ಎಂದು ನಾನು ಹೇಳುವಾಗ ಅವಳು - ಕುಡಿಯಪ್ಪಾ ಮತ್ತು ನಿನ್ನ ಒಂಟೆಗಳಿಗೂ ನೀರು ತಂದುಕೊಡುತ್ತೇನೆ ಅನ್ನುವಳೋ, ಅವಳೇ ಯೆಹೋವನಿಂದ ನನ್ನ ದಣಿಯ ಮಗನಿಗೆ ನೇಮಕವಾದ ಕನ್ನಿಕೆಯಾಗಿರಲಿ ಅಂದೆನು. ನಾನು ಹೀಗೆ ಮನಸ್ಸಿನೊಳಗೆ ಮಾತಾಡಿಕೊಳ್ಳುತ್ತಿರುವಾಗಲೇ ರೆಬೆಕ್ಕಳು ಹೆಗಲಿನ ಮೇಲೆ ಕೊಡವನ್ನು ಹೊತ್ತುಕೊಂಡು ಬರುವದನ್ನು ಕಂಡೆನು.

ಆಕೆ ಬುಗ್ಗೆಗೆ ಇಳಿದು ನೀರನ್ನು ತೆಗೆದುಕೊಂಡು ಬಂದಾಗ ನಾನು ಆಕೆಗೆ - ನನಗೆ ನೀರನ್ನು ಕುಡಿಯುವದಕ್ಕೆ ಕೊಡ ಬೇಕಮ್ಮಾ ಎಂದು ಹೇಳಿದೆನು. ತತ್ ಕ್ಷಣವೇ ಆಕೆ ಕೊಡವನ್ನು ಹೆಗಲಿನಿಂದ ಇಳಿಸಿ - ಕುಡಿಯಪ್ಪಾ, ನಿನ್ನ ಒಂಟೆಗಳಿಗೂ ತಂದು ಕೊಡುತ್ತೇನೆ ಅಂದಳು. ನಾನು ಕುಡಿದ ಮೇಲೆ ಆಕೆ ಒಂಟೆಗಳಿಗೂ ನೀರು ತಂದು ಕೊಟ್ಟಳು. ನೀನು ಯಾರ ಮಗಳೆಂದು ನಾನು ಕೇಳಿದ್ದಕ್ಕೆ ಆಕೆ - ನಾಹೋರನಿಗೆ ಮಿಲ್ಕಳಲ್ಲಿ ಹುಟ್ಟಿದ ಬೆತೂವೇಲನ ಮಗಳು ಅಂದಳು. ಅದನ್ನು ಕೇಳಿ ನಾನು ಆಕೆಯ ಮೂಗಿಗೆ ಮೂಗುತಿಯನ್ನೂ ಕೈಗಳಿಗೆ ಬಳೆಗಳನ್ನೂ ಇಟ್ಟು ನನ್ನ ದಣಿಯಾದ ಅಬ್ರಹಾಮನ ದೇವರಾದ ಯೆಹೋವನಿಗೆ ಬೊಗ್ಗಿ ನಮಸ್ಕರಿಸಿ ಆತನು ನನ್ನ ದಣಿಯ ಮಗನಿಗೋಸ್ಕರ ಅವನ ತಮ್ಮನ ಮಗಳನ್ನೇ ತೆಗೆದುಕೊಳ್ಳುವಂತೆ ನನ್ನನ್ನು ನೀಟಾದ ದಾರಿಯಲ್ಲಿ ಕರೆದುಕೊಂಡು ಬಂದದ್ದಕ್ಕಾಗಿ ಆತನನ್ನು ಕೊಂಡಾಡಿದೆನು ."



ಓ ಹೌದು! ಆತನು ಬಂದ ಕಾರಣ ಮತ್ತು ಬಾವಿಯ ಬಳಿಯ ಅನುಭವಗಳನ್ನು **ವಿವರವಾಗಿ** ಹೇಳುತ್ತಾನೆ ಮತ್ತು ಹೇಗೆ ದೇವರು ಅಧಿಕ ದಯೆಯಿಂದ ಮತ್ತು **ಅದ್ಭುತವಾಗಿ** ಇಸಾಕನಿಗೆ ನೇಮಿಸಿದ ರೆಬಕ್ಕಳನ್ನು ಕಂಡು ಹಿಡಿಯುವುದಕ್ಕೆ ಮಾರ್ಗದರ್ಶನ ನೀಡಿದರು ಎಂದು ಹೇಳಿ ಕೊನೆಯದಾಗಿ ಎಲೀಜರನು ಅವರಿಗೆ ಹೀಗೆ ಕೇಳುತ್ತಾನೆ

## ಆದಿಕಾಂಡ 24:49

**"ಹೀಗಿರುವಲ್ಲಿ ನೀವು ನನ್ನ ದಣಿಗೆ ಪ್ರೀತಿಯಿಂದಲು ನಂಬಿಕೆಯಿಂದಲೂ ನಡೆಯುವದಕ್ಕೆ ಒಪ್ಪಿದರೆ ನನಗೆ ಹೇಳಿರಿ; ಇಲ್ಲವಾದರೆ ಇಲ್ಲವೆನ್ನಿರಿ; ಆಗ ನಾನು ಬಲಗಡೆಗಾಗಲಿ ಎಡಗಡೆಗಾಗಲಿ ತಿರುಗಿಕೊಂಡು ಹೋಗುವೆನು ಅಂದನು."**

ಆತನು ಬೆತೂವೇಲನು ಮತ್ತು ಲಾಬಾನನಿಗೆ ರೆಬೆಕ್ಕಳು ಇಸಾಕನ "ಕೈ" ಹಿಡಿಯುವುದರ ತೀರ್ಮಾನದ ಬಗ್ಗೆ ಕೇಳಿದನು –

**"ಆಗ ನಾನು ಬಲಗಡೆಗಾಗಲಿ ಎಡಗಡೆಗಾಗಲಿ ತಿರುಗಿಕೊಂಡು ಹೋಗುವೆನು"**

ಇದು **ಸಮ್ಮತಿಸುವುದರ ("ಬಲಗಡೆ") ಅಥವಾ ತಿರಸ್ಕರಿಸುವುದನ್ನು ("ಎಡಗಡೆ")** ಕುರಿತು ಸೂಚಿಸುತ್ತದೆ.

ಮತ್ತು ಅವರು ಹೀಗೆ ಉತ್ತರಿಸುತ್ತಾರೆ.....

## ಆದಿಕಾಂಡ 24:50,51

**"ಅದಕ್ಕೆ ಲಾಬಾನನೂ ಬೆತೂವೇಲನೂ – ಈ ಕಾರ್ಯವು ಯೆಹೋವನಿಂದಲೇ ಉಂಟಾಯಿತು. ನಾವಂತೂ ಹೌದೆಂದೂ ಅಲ್ಲವೆಂದೂ ಹೇಳಲಾರೆವು. ರೆಬೆಕ್ಕಳನ್ನು ನಿನ್ನ ವಶಕ್ಕೆ ಕೊಡುತ್ತೇವೆ; ಕರೆದುಕೊಂಡು ಹೋಗಬಹುದು; ಯೆಹೋವನು ಹೇಳಿದಂತೆಯೇ ಆಕೆ ನಿನ್ನ ದಣಿಯ ಮಗನಿಗೆ ಹೆಂಡತಿಯಾಗಲಿ ಅಂದರು."**

ಮತ್ತು ಮುಂದಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ.....

## ಆದಿಕಾಂಡ 24:53

**"ಆ ಮೇಲೆ ತಾನು ತಂದಿದ್ದ ಬೆಳ್ಳಿಬಂಗಾರದ ಒಡವೆಗಳನ್ನೂ ವಸ್ತ್ರಗಳನ್ನೂ ತೆಗೆದು ರೆಬೆಕ್ಕಳಿಗೆ ಕೊಟ್ಟನು.**
**ಆಕೆಯ ಅಣ್ಣನಿಗೂ ತಾಯಿಗೂ ಸಹ ಬೆಲೆಯುಳ್ಳ ಉಡುಗೊರೆಗಳನ್ನು ಕೊಟ್ಟನು."**

ಎಲೀಜರನು ರೆಬೆಕ್ಕಳಿಗೆ ಉಡುಗೊರೆಯಾಗಿ **"ಬೆಳ್ಳಿಬಂಗಾರದ ಒಡವೆಗಳನ್ನೂ**

**ವಸ್ತ್ರಗಳನ್ನೂ** ಕೊಡುತ್ತಾನೆ.

....ಮತ್ತು ಆಕೆ0ಯ ಅಣ್ಣನಿಗೂ ತಾಯಿಗೂ....."**ಬೆಲೆಯುಳ್ಳ ಉಡುಕೊರೆಗಳನ್ನು**" ಕೊಟ್ಟನು.

ಇಲ್ಲಿ ಮೊದಲು ಬೆಳ್ಳಿ ಮತ್ತು ಇದರ ನಂತರ **ಚಿನ್ನದ** ಒಡವೆಗಳನ್ನು ಕೊಡುವುದು ಅಪರಿಚಿತವಾಗಿದೆ0ಯಲ್ಲವೇ?!

ಹೌದು! ಇದರಲ್ಲಿ ಒಂದು **ಸಂಕೇತ ಅಥವಾ ಸೂಚನೆ ಇರಬೇಕು!**

ಅನಂತರ ನಾವು ಹೀಗೆ ಓದಿ ಓದುತ್ತೇವೆ–

## ಆದಿಕಾಂಡ 24:54-56

"ಬಳಿಕ ಅವನೂ ಅವನ ಸಂಗಡ ಬಂದ ಮನುಷ್ಯರೂ ಊಟ ಉಪಚಾರಗಳನ್ನು ತೀರಿಸಿಕೊಂಡು ರಾತ್ರಿ0ಯೆಲಾ ಅಲ್ಲೇ ಇದ್ದರು. ಬೆಳಿಗ್ಗೆ ಎದ್ದಾಗ ಅವನು - ನನ್ನ ದಣಿ0ಯ ಬಳಿಗೆ ಹೊರಡುವದಕ್ಕೆ ನನಗೆ ಅಪ್ಪಣೆ0ಯಾಗಲಿ ಎಂದು ಕೇಳಲು ರೆಬೆಕ್ಕಳ ಅಣ್ಣನೂ ತಾಯಿ0ಯೂ ಅವನಿಗೆ - ಹುಡುಗಿ0ಯು ಇನ್ನು ಎಂಟು ಹತ್ತು ದಿನವಾದರೂ ನಮ್ಮಲ್ಲಿರಲಿ; ಆ ಮೇಲೆ ಆಕೆ ಹೋಗಬಹುದು ಎಂದು ಹೇಳಿದರು. ಅವನು ಅವರಿಗೆ - 0ಯೆಹೋವನು ನನ್ನ ಪ್ರ0ಯಾಣವನ್ನು ಸಫಲ ಮಾಡಿದ್ದಾನೆ; ಆದದರಿಂದ ನನ್ನನ್ನು ತಡೆ0ಯಬೇಡಿರಿ: ನನ್ನ ದಣಿ0ಯ ಬಳಿಗೆ ಹೋಗುವದಕ್ಕೆ ನನಗೆ ಅಪ್ಪಣೆ0ಯಾಗಬೇಕೆಂದು ಹೇಳಲು ಅವರು"



ಎಲೀಜರನು ಆ ರಾತ್ರಿ ಅಲ್ಲಿ ಕಳೆ0ಯುತ್ತಾನೆ ಮತ್ತು ರೆಬೆಕ್ಕಳ ಕುಟುಂಬದವರು ಆತನನ್ನು "**ಕೊನೆ0ಯ ಪಕ್ಷ 10 ದಿನಗಳಾದರೂ**" ತಂಗುವುದಕ್ಕೆ ಕೇಳಿಕೊಳ್ಳುತ್ತಾರೆ

ಆದರೆ ಮರುದಿನ **ಬೆಳಗ್ಗೆ ತಕ್ಷಣ ಹೊರಡಲು** ಅಪ್ಪಣೆಯನ್ನು ಕೇಳಿಕೊಳ್ಳುತ್ತಾನೆ.

ಅದಕ್ಕೆ ವಿರೋಧವಾಗಿ ಆತನನ್ನು ಮನವೊಲಿಸಲು ಪ್ರಯತ್ನಿಸುತ್ತಾರೆ ಆದರೆ ಆತನು ಕಾನಾನಿಗೆ ಹೋಗುವುದರಲ್ಲಿ ದೃಡನಿಶ್ಚಯವುಳ್ಳವನಾಗಿದ್ದನು.

ಅವನು ತಾವು ಹೊರಡಲೇ ಬೇಕು ಎಂದು **ಒತ್ತಾಯ ಮಾಡುವಾಗ,** ಅವರು ರೆಬೆಕ್ಕಳನ್ನು ಕರೆದು ಹೀಗೆ ಕೇಳುತ್ತಾರೆ......



**ಆದಿಕಾಂಡ 24:58**

**" ಈ ಮನುಷ್ಯನ ಜೊತೆಯಲ್ಲಿ ಹೋಗುವಿಯಾ ಎಂದು ಕೇಳಿದರು."**

ಅವರು ಕೇಳಿದಾಗ ಆಕೆಯು ಹೀಗೆ ಹೇಳುತ್ತಾಳೆ –

**"ಹೋಗುತ್ತೇನೆ"**

ರೆಬೆಕ್ಕಳ **ನಂಬಿಕೆಯು** ಬಗ್ಗೆ ಸ್ವಲ್ಪ ಊಹಿಸಿ ನೋಡಿರಿ –

24 **ಗಂಟೆಗಳ** ಸಮಯದಷ್ಟೂ ಅವರ ಬಗ್ಗೆ ಗೊತ್ತಿಲ್ಲದ ಒಬ್ಬ ವ್ಯಕ್ತಿಯ **ಜೊತೆ ಹೋಗುವುದಕ್ಕೆ** ಸಿದ್ಧಳಾಗಿದ್ದಳು !

**ಆಕೆಯು ಈ ತೀರ್ಮಾನ ತೆಗೆದುಕೊಳ್ಳುವಲ್ಲಿ ತನ್ನ ಜೀವನವನ್ನು ತಾನೇ ಅಪಾಯಕ್ಕೆ ದೂಡುತ್ತಿದ್ದಾಳೆ.**

ಮತ್ತು ಇದರ ನಂತರ ನಾವು ಹೀಗೆ ಓದುತ್ತೇವೆ –

**ಆದಿಕಾಂಡ 24:60**

**" ತಂಗಿಯೇ, ನಿನ್ನಿಂದ ಲಕ್ಷಾಂತರ ಸಂತಾನವಾಗಲಿ; ನಿನ್ನ ಸಂತಾನದವರು ತಮ್ಮ ವೈರಿಗಳ ಪಟ್ಟಣಗಳನ್ನು ಸ್ವಾಧೀನಮಾಡಿಕೊಳ್ಳಲಿ ಎಂದು ಹೇಳಿ ಹರಸಿದರು."**

ಹೌದು ! ರೆಬೆಕ್ಕಳು ವಿಶಿಷ್ಟವಾದ ಆಶೀರ್ವಾದವನ್ನು ಹೊಂದಿಕೊಳ್ಳುತ್ತಾಳೆ -

"ನಿನ್ನಿಂದ ಲಕ್ಷಾಂತರ ಸಂತಾನವಾಗಲಿ......."

**ಇದು ಬಹಳ ವಿಚಿತ್ರವಾಗಿದೆಯಲ್ಲವೇ?**

**ನೇರವಾದ ಭಾಷೆಯಲ್ಲಿ ನೋಡುವಾಗ ಆಕೆಗೆ ಅಷ್ಟೊಂದು ಮಕ್ಕಳಾಗಲು ಹೇಗೆ ಸಾಧ್ಯ?**

ಇದರ **ಸೂಚನೆಯನ್ನು ಕುರಿತು** ಆ ಮೇಲೆ ಇದೇ ಅಧ್ಯಯನದಲ್ಲಿ ಅರ್ಥ ಮಾಡಿಕೊಳ್ಳೋಣ.

ನಂತರ ನಾವು ಹೀಗೆ ಓದುತ್ತೇವೆ—



**ಆದಿಕಾಂಡ 24:61**

"ರೆಬೆಕ್ಕಳೂ ಆಕೆಯ ದಾಸಿಯರೂ ಒಂಟೆಗಳ ಮೇಲೆ ಹತ್ತಿದವರಾಗಿ ಅಬ್ರಹಾಮನ ಸೇವಕನ ಹಿಂದೆ ಹೋದರು. ಹೀಗೆ ಆ ಸೇವಕನು ರೆಬೆಕ್ಕಳನ್ನು ಕರಕೊಂಡು ಹೊರಟನು"

ಹೌದು ! ಕೊನೆಯಲ್ಲಿ ರೆಬೆಕ್ಕಳೂ ಆಕೆಯ ಸಹಾಯಕ್ಕಾಗಿ.........

"ದಾಸಿಯರೂ" ಎಲೀಯೆಜರನ ಜೊತೆ ಹೊರಡುತ್ತಾರೆ.

ಅಬ್ರಹಾಮನ ದೇಶವಾದ – **ಕಾನಾನಿಗೆ** ಅವರು ದೀರ್ಘವಾದ ಪ್ರಯಾಣ ಮಾಡುತ್ತಾರೆ !

ಕೊನೆಯಲ್ಲಿ, ಆ ಪ್ರಯಾಣವು ಮುಗಿದಾಗ ಹೀಗೆ ಓದುತ್ತೇವೆ –

**ಆದಿಕಾಂಡ 24:63-67**

"ಅವನು ಸಂಜೀವೇಳೆಯಲ್ಲಿ ಧ್ಯಾನ ಮಾಡುವದಕ್ಕೋಸ್ಕರ ಅಡವಿಗೆ ಹೋಗಿದ್ದಾಗ ಕಣ್ಣೆತ್ತಿ ನೋಡಲಾಗಿ ಒಂಟೆಗಳು ಬರುವದನ್ನು ಕಂಡನು. ರೆಬೆಕ್ಕಳು ಕಣ್ಣೆತ್ತಿ

ಇಸಾಕನನ್ನು ನೋಡಿ ಒಂಟೆಯಿಂದ ಬೇಗ ಇಳಿದು - ನಮ್ಮನ್ನು ಎದುರುಗೊಳ್ಳುವದಕ್ಕೆ ಅಡವಿಯಲ್ಲಿ ನಡೆದು ಬರುವ ಆ ಮನುಷ್ಯನು ಯಾರೆಂದು ಆ ಸೇವಕನನ್ನು ಕೇಳಿದಳು. ಅವನೇ ನನ್ನ ದಣಿಯೆಂದು ಅವನು ಹೇಳಿದಾಗ ಆಕೆ ಮುಸುಕುಹಾಕಿ ಕೊಂಡಳು.
ಆ ಸೇವಕನು ತಾನು ಮಾಡಿದ ಕಾರ್ಯಗಳನ್ನೆಲ್ಲಾ ಇಸಾಕನಿಗೆ ತಿಳಿಸಿದ ನಂತರ ಇಸಾಕನು ಆಕೆಯನ್ನು ತಾಯಿಯಾದ ಸಾರಳ ಗುಡಾರಕ್ಕೆ ಕರೆದುಕೊಂಡು ಹೋದನು. ಈ ರೀತಿಯಾಗಿ ಅವನು ರೆಬೆಕ್ಕಳನ್ನು ವರಿಸಿದನು. ಆಕೆ ಅವನ ಹೆಂಡತಿಯಾದಳು. ಅವನು ಆಕೆಯನ್ನು ಪ್ರೀತಿಸಿ ತನ್ನ ತಾಯಿ ಸತ್ತ ದುಃಖವನ್ನು ಶಮನಮಾಡಿಕೊಂಡನು..... "



ಅವರು ಪ್ರಯಾಣವನ್ನು ಮುಗಿಸುವ ವೇಳೆಯಲ್ಲಿ ಇಸಾಕನು "ಅಡವಿಯಲ್ಲಿ" ಧ್ಯಾನ ಮಾಡುವುದನ್ನು ನೋಡುತ್ತಾರೆ ಮತ್ತು ಎಲೀಯೆಜರನನ್ನು ಆಕೆಯು ವಿಚಾರಿಸುವಾಗ ಆತನು ಹೀಗೆ ಗುರುತನ್ನು ಹೇಳುತ್ತಾನೆ.

" ಅವನೇ ನನ್ನ ದಣಿ "

ನಂತರ ಆಕೆ ಮುಸುಕು ಹಾಕಿಕೊಳ್ಳುತ್ತಾಳೆ ಮತ್ತು ಇದರ ನಂತರ ಆಕೆಯು ಇಸಾಕನನ್ನು ಭೇಟಿಯಾಗಿ ನಂತರ ಮದುವೆಯಾಗಿ ಇಸಾಕನಿಗೆ ಹೆಂಡತಿಯಾಗುತ್ತಾಳೆ.

ಈ ಸತ್ಯವೇದದ ವಾಕ್ಯಭಾಗ – ಒಂದು ನಿದರ್ಶನ ಮತ್ತು ನೆರಳು ಮತ್ತು ಜೊತೆಗೆ ಇದು ಅಬ್ರಹಾಮನ ಜೀವನದಲ್ಲಿ ನಡೆದಿದೆ.

**ಹೌದು! ಇದು ನಿಜವಾಗಿ ಅಭಿನಯಿಸಲ್ಪಟ್ಟ ನಿದರ್ಶನವಾಗಿದೆ ಮತ್ತು ಸಭೆಯಾಗಿರುವ "ನಮಗೆ" ಅತಿ ವಿಶೇಷ ಮತ್ತು ಮುಖ್ಯವಾಗಿದೆ.**

ಈಗ ನಾವು ಓದಿದ ವಾಕ್ಯಗಳಲ್ಲಿ "ನಿದರ್ಶನಗಳು" ಏನನ್ನು ಸೂಚಿಸುತ್ತದೆ ಎಂದು ನೋಡೋಣ –

ಅಬ್ರಹಾಮನು ತನ್ನ "ಒಬ್ಬನೇ" ಪ್ರಿಯ ಮಗನಾದ ಇಸಾಕನಿಗೆ ಹೇಗೆ **ಮದಲಗಿತ್ತಿಯನ್ನು** ಹುಡುಕಲು ಕಳುಹಿಸಿದನೋ –

ಅದೇರೀತಿ ಈ ಕಾಲದಲ್ಲಿ ಮದಲಗಿತ್ತಿಗಾಗಿ **ಇನ್ನೊಂದು** ಆಯ್ಕೆಯ ಕಾರ್ಯವಿಧಾನವು ನಡೆಯುತ್ತಿದೆ!!

ಕೆಳಗಿನ ವಾಕ್ಯದಲ್ಲಿ ಓದೋಣ –

## 2 ಕೊರಿಂಥದವರಿಗೆ 11:2

"ಯಾಕೆಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯಮಾಡಿದೆನಲ್ಲಾ."

ಹೌದು! ಇದು ಯೇಸುವಿಗಾಗಿ ಆಯ್ಕೆಯಾಗುತ್ತಿರುವ ಮದಲಗಿತ್ತಿ

**ಸಭೆಯೇ ಆ ಮದಲಗಿತ್ತಿ**

**ಪ್ರಕಟನೆ 19:7** ➔ "ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ; ಸಂತೋಷಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ ಎಂದು ಹೇಳಿತು."

ಮತ್ತು ಈಗ ಆ ಮದಲಗಿತ್ತಿಗಾಗಿ **ಆಯ್ಕೆಯ ಕಾರ್ಯವಿಧಾನವು – ಸಭೆಯ** ವರ್ಗಕ್ಕಾಗಿ ನಡೆಯುತ್ತಿದೆ.

**ಮತ್ತು ಈ ನಿದರ್ಶನ ಮತ್ತು ಛಾಯೆಗಳ ಮೂಲಕ ಕ್ರಿಸ್ತನ ಮದಲಗಿತ್ತಿಯಾದ ಸಭೆ ಈ ಆಯ್ಕೆಯ ಬಗ್ಗೆ ಬಹಳ ಸ್ಪಷ್ಟವಾಗಿ ಮತ್ತು ಆಳವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ!**

**ಈ ನಿದರ್ಶನದಲ್ಲಿರುವ ವಿವಿಧ ಛಾಯೆಗಳನ್ನು ಕುರಿತು ನೋಡೋಣ –**

## ಅಬ್ರಹಾಮನು

**ತಂದೆಯಾದ ದೇವರಿಗೆ ಛಾಯೆಯಾಗಿದ್ದಾನೆ.**

ಏಕೆಂದರೆ ಹೇಗೆ ತಂದೆಯಾದ ದೇವರು ಈ ಲೋಕದ ರಕ್ಷಣೆಗಾಗಿ ತನ್ನ **"ಏಕೈಕ ಪುತ್ರ"**ನಾದ ಯೇಸುವನ್ನು ಬಲಿಯಾಗಿ ಕೊಟ್ಟನೋ ಹಾಗೆಯೇ ಅಬ್ರಹಾಮನು **ತನ್ನ ಒಬ್ಬನೇ ಮಗನಾದ** ಇಸಾಕನನು ಬಲಿಕೊಡಲು ಇಚ್ಛೆಯುಳ್ಳವನಾಗಿದ್ದನು. (**ಯೋಹಾನ** 3:16)

## ಇಸಾಕನು

ತಂದೆಯಾದ ದೇವರ **ಒಬ್ಬನೇ ಮಗನಾದ ಯೇಸುವನ್ನು** ಸೂಚಿಸುತ್ತಾನೆ. (**ಯೋಹಾನ** 1:18)

## ಎಲೀಯೆಜರನು

**ಯಾರನ್ನು ಸೂಚಿಸುತ್ತಾನೆ?**

ಹೇಗೆ ಎಲೀಯೆಜರನು ಅಬ್ರಹಾಮನಿಗೆ **ಪ್ರಧಾನ ಸೇವಕನಾಗಿದ್ದನೋ** ಹಾಗೆಯೇ ದೇವರಿಗೂ ಸಹ ಆತನ ಎಲ್ಲಾ ಕಾರ್ಯ ನಿರ್ವಹಿಸುವ ಪ್ರಧಾನ ಸೇವಕನಿರುವನು!

ಸೇವಕರು ಸಾಧಾರಣವಾಗಿ **ತಮ್ಮ ಬಗ್ಗೆ ತಾವೇ ಮಾತನಾಡಿಕೊಳ್ಳುವುದಿಲ್ಲ,** ಅದೇ ರೀತಿ ದೇವರ ಈ ಪ್ರಧಾನ ಸೇವಕನ ಬಗ್ಗೆ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 16:13**

" ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು;
ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು."

ಹೌದು! **ಪವಿತ್ರಾತ್ಮನ ದೈವೀಕ ಶಕ್ತಿಯಿಂದ** ಸಭೆಯು ಈಗ ಆಯ್ಕೆಯಾಗುತ್ತಿದೆಯೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಲೂಕ** 24:49 ➔ " ಇಗೋ ನನ್ನ ತಂದೆಯು ವಾಗ್ದಾನಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರ ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು "

ಹೌದು! ಎಲೀಯೆಜರನು **ದೇವರ ಪವಿತ್ರಾತ್ಮವನ್ನು** ಸೂಚಿಸುತ್ತಾನೆ.

ನಂತರ ನಾವು ಹೀಗೆ ಓದುತ್ತೇವೆ

## ಆದಿಕಾಂಡ 24:3

" ನಾನುವಾಸವಾಗಿರುವ ಕಾನಾನ್ಯರಲ್ಲಿ ನೀನು ನನ್ನ ಮಗನಿಗೋಸ್ಕರ ಹೆಣ್ಣನ್ನು ತೆಗೆದುಕೊಳ್ಳದೆ "

ಇದು ದೇವರು ತನ್ನ ಮಗನಿಗಾಗಿ "**ತಾನು ವಾಸಿಸುವ**" ಪರಲೋಕದಿಂದ ದೇವದೂತರಲ್ಲಿ ಮದಲಗಿತ್ತಿಯನ್ನು ಆಯ್ಕೆ ಮಾಡಬಾರದೆಂದು ತೆಗೆದುಕೊಳ್ಳುವ ತೀರ್ಮಾನವನ್ನು ಸೂಚಿಸುತ್ತದೆ.

ಆಯ್ಕೆಯ ವಿಧಾನವು ಬಹಳ **ಸ್ಪಷ್ಟವಾಗಿದೆ** !

ಈಗ ಕೆಳಗಿನ ವಾಕ್ಯವನ್ನು ಓದೋಣ –

## ಆದಿಕಾಂಡ 24:4

" ನನ್ನ ಸ್ವದೇಶಕ್ಕೂ ನನ್ನ ಬಂಧುಗಳ ಬಳಿಗೂ ಹೋಗಿ ಅವರಲ್ಲೇ ನನ್ನ ಮಗನಾದ ಇಸಾಕನಿಗೆ ಹೆಣ್ಣನ್ನು ತೆಗೆದುಕೊಳ್ಳಬೇಕು."

ಹೌದು ! ಇದು ಪರಲೋಕದಿಂದ **ಬಹು ದೂರ ಇರುವ(ದೂರ ದೇಶದಂತಿರುವ) ಭೂಮಿಯನ್ನು** ಸೂಚಿಸುತ್ತದೆ !

ಹೌದು! ದೇವರು ತನ್ನ **ಒಬ್ಬನೇ** ಮಗನಿಗೆ **ಮನುಷ್ಯ** ಜಾತಿಯಲ್ಲಿ ಮದಲಗಿತ್ತಿಯನ್ನು ಆಯ್ಕೆ ಮಾಡುವುದಕ್ಕೆ ತೀರ್ಮಾನಿಸುತ್ತಾನೆ !!

ನಂತರ ನಾವು ಏನನ್ನು ಓದುತ್ತೇವೆ....

## ಆದಿಕಾಂಡ 24:10

" ತರುವಾಯ ಆ ಸೇವಕನು ತನ್ನ ದಣಿಯ ಒಂಟೆಗಳಲ್ಲಿ ಹತ್ತು ಒಂಟೆಗಳನ್ನು ಸಿದ್ಧಮಾಡಿ ದಣಿಯ ಆಸ್ತಿಯಿಂದ ಶ್ರೇಷ್ಠವಾದ ಒಡವೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಹೊರಟು ಎರಡು ನದಿಗಳ ಮಧ್ಯದಲ್ಲಿರುವ ಅರಾಮ್ ಸೀಮೆಗೆ ಬಂದು ನಾಹೋರನು ವಾಸಿಸಿದ ಊರನ್ನು ಮುಟ್ಟಿದನು. "

ಹೌದು! ಎಲೀಜರನು **10 ಒಂಟೆಗಳನ್ನು** ತೆಗೆದುಕೊಂಡನು.

**ಇದು ಏನನ್ನು ಸೂಚಿಸುತ್ತದೆ?**

ಇದು ದೇವರ ವಾಕ್ಯವನ್ನು ವಿಶೇಷವಾಗಿ **10 ಮಹಾ ಸತ್ಯವನ್ನು** ಸೂಚಿಸುತ್ತದೆ,
ಇದೇ ರೀತಿ ಲೂಕ **15:8** ರಲ್ಲಿ "ಹತ್ತು ಪಾವಲಿ"ಗಳು ಹತ್ತು ಮಹಾ
ಸತ್ಯಗಳನ್ನು ಸೂಚಿಸುತ್ತದೆ.
ಪವಿತ್ರಾತ್ಮನು ಈ ಸತ್ಯಗಳನ್ನು "ಹೊತ್ತುಕೊಂಡು" ಸಭೆಗೆ ಪ್ರಕಟಿಸುತ್ತಾನೆ.

**ಯೋಹಾನ 16:13** ➔ "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು
ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ
ಸೇರಿಸುವನು."

ಹೌದು! **ಅಭ್ಯಾಸ** # **46** ರಲ್ಲಿ ಈ **ವಿಶೇಷವಾದ ಹತ್ತು ಸತ್ಯಗಳನ್ನು** ಕುರಿತು
ಅಭ್ಯಾಸ ಮಾಡಲಿದ್ದೇವೆ.

ನಂತರ ನಾವು ಹೀಗೆ ಓದುತ್ತೇವೆ–

**ಆದಿಕಾಂಡ 24:11**

" ಸಾಯಂಕಾಲದಲ್ಲಿ ಸ್ತ್ರೀಯರು ನೀರು ತರುವದಕ್ಕೆ ಹೋಗುವಾಗ
ಅವನು ಊರಿನ ಹೊರಗಡೆ ಬಾವಿಯ ಹತ್ತಿರ ಒಂಟೆಗಳನ್ನು
ಮಲಗಿಸಿ "

**ಇದು ಏನನ್ನು ಸೂಚಿಸುತ್ತದೆ ?**

ಇದು "ಜೀವ ತಣ್ಣೀರಿರುವ" ಬಾವಿ – ಸತ್ಯವೇದವು!

**ಯೋಹಾನ 4:10** - "ನೀನು ಅವನನ್ನು ಬೇಡಿಕೊಳ್ಳುತ್ತಿದ್ದಿ,
ಅವನು ನಿನಗೆ ಜೀವಕರವಾದ ನೀರನ್ನು ಕೊಡುತ್ತಿದ್ದನು
ಅಂದನು"

" .....ಸ್ತ್ರೀಯರು ನೀರು ತರುವುದಕ್ಕೆ ಹೋಗುವಾಗ..."

ಇದು "ಜೀವ ತಣ್ಣೀರಾಗಿರುವ" ದೇವರ ವಾಕ್ಯಕ್ಕಾಗಿ ಹುಡುಕುತ್ತಿರುವ
ಜನರನ್ನು ಸೂಚಿಸುತ್ತದೆ –
ವಿವಿಧ ಸಭೆಗಳಲ್ಲಿರುವ ಕ್ರೈಸ್ತರು.

# ರೆಬೆಕ್ಕ

**ಇದು ಕ್ರಿಸ್ತನ ನಿರೀಕ್ಷೆ0ಯುಳ್ಳ ಮದಲಗಿತ್ತಿಯನ್ನು ಸೂಚಿಸುತ್ತದೆ –**

**.......ಸಭೆ0ಯ ವರ್ಗ.**

ಆಕೆಯು "ಸುಂದರ"ವಾಗಿ ಮತ್ತು "ಕನ್ಯೆ"0ಯಾಗಿರುವದು ಮದಲಗಿತ್ತಿಯ ಒಳ್ಳೆಯ ಗುಣ ಹಾಗೂ **ಶುದ್ಧವಾದ** ದೇವರ ಸತ್ಯ ವಾಕ್ಯಗಳಿಗೆ ಆಕೆಯ **ನಂಬಿಗಸ್ತಿಕೆ0ಯನ್ನು** ಸೂಚಿಸುತ್ತದೆ.

ನಂತರ ನಾವು ಹೀಗೆ ಓದುತ್ತೇವೆ –

## ಆದಿಕಾಂಡ 24:19-21

“ ನಾನು ನಿನ್ನ ಒಂಟೆಗಳಿಗೂ ಬೇಕಾದಷ್ಟು ನೀರು ತಂದುಕೊಡುತ್ತೇನೆ ಎಂದು ಹೇಳಿ ಕೊಡದಲ್ಲಿದ್ದ ನೀರನ್ನು
ದೋಣಿ0ಯೊಳಗೆ ಹೊಯಿದು ತಿರಿಗಿ ತರುವದಕ್ಕೆ ಬಾವಿಗೆ ತ್ವರೆ0ಯಾಗಿ ಹೋದಳು.
ಹೀಗೆ ಅವನ ಎಲ್ಲಾ ಒಂಟೆಗಳಿಗೂ ತಂದುಕೊಟ್ಟಳು.
ಅಷ್ಟರಲ್ಲಿ ಆ ಮನುಷ್ಯನು ಏನೂ ಮಾತಾಡದೆ ಆಕೆ0ಯನ್ನು ದೃಷ್ಟಿಸಿನೋಡುತ್ತಾ –
0ಯೆಹೋವನು ನನ್ನ ಪ್ರ0ಯಾಣವನ್ನು ಸಫಲ ಮಾಡಿದನೋ ಇಲ್ಲವೋ ಎಂದು ತಿಳಿ0ಯುವದಕ್ಕಾಗಿ ಕಾದುಕೊಂಡಿದ್ದನು.”

**ಇದು ಏನನ್ನು ಸೂಚಿಸುತ್ತದೆ?**

ಇದು ದೇವರ ವಾಕ್ಯ ಮತ್ತು **ಸತ್ಯಕ್ಕಾಗಿ ದಣಿ0ಯದೆ ಸೇವೆ** ಮಾಡುತ್ತಿರುವ **ಉತ್ಸಾಹ** ಮತ್ತು **ಆವೇಶ** ತುಂಬಿರುವ ಸಭೆ0ಯ ವರ್ಗದವರನ್ನು ಸೂಚಿಸುತ್ತದೆ.

ನಂತರ ನಾವು ಹೀಗೆ ಓದುತ್ತೇವೆ –

## ಆದಿಕಾಂಡ 24:22

“ ಒಂಟೆಗಳು ಕುಡಿದ ನಂತರ ಅವನು ಆಕೆ0ಯ ಮೂಗಿಗೆ ಅರ್ಧ ತೊಲೆ0ಯ ತೂಕವುಳ್ಳ ಒಂದು ಚಿನ್ನದ ಮೂಗುತಿ0ಯನ್ನೂ ಆಕೆ0ಯ ಕೈಗಳಿಗೆ ಹತ್ತು ತೊಲೆ0ಯ ತೂಕವುಳ್ಳ ಎರಡು ಚಿನ್ನದ ಬಳೆಗಳನ್ನೂ ಇಟ್ಟು”

**ಇದು ಏನನ್ನು ಸೂಚಿಸುತ್ತದೆ?**

**ಇವು ಬೆಲೆಬಾಳುವ ಉಡುಗೊರೆಗಳು!!**

ಇದು **ಪವಿತ್ರಾತ್ಮನ** (ಎಲೀಜರನು) ಮೂಲಕ "ಮದಲಗಿತ್ತಿ" ವರ್ಗಕ್ಕೆ ನೀಡುವ

## ಚಿನ್ನದ ಉಡುಗೊರೆಗಳು

(ಚಿನ್ನವು ದೈವೀಕತ್ವವನ್ನು ಸೂಚಿಸುತ್ತದೆ ಏಕೆಂದರೆ ಗುಡಾರದಲ್ಲಿನ "ಪರಿಶುದ್ಧ" ಮತ್ತು "ಅತಿ ಪರಿಶುದ್ಧ"ದಲ್ಲಿರುವ ವಸ್ತುಗಳನ್ನು ಚಿನ್ನದಿಂದ ಮಾಡಲಾಗಿತ್ತು)



### “ಓಲೆ”

ಇದು **ಕೇಳಿಸಿಕೊಂಡು** ಅರ್ಥಮಾಡಿಕೊಳ್ಳುವಂತಹ ಕಿವಿ0ಯನ್ನು ಸೂಚಿಸುತ್ತದೆ.

ದೇವರು ತನ್ನ ದೈವೀಕ ಶಕ್ತಿಯಿಂದ ಕಿವಿ ತೆರೆ0ಯುವುದನ್ನು ಸೂಚಿಸುತ್ತದೆ.

0ಯೇಸುವಿನ ವಾಕ್ಯವನ್ನು ನೆನಪಿಸಿಕೊಳ್ಳಿರಿ – **“ಕೇಳುವದಕ್ಕೆ ಕಿವಿ0ಯುಳ್ಳವನು ಕೇಳಲಿ”** !

ಗಮನಿಸಿ : [1]“ಮೂಗುತಿ” ಎಂಬ ಪದವು ಇಬ್ರಿ0ಯ ಪದವಾದ –
“ನೆಜೆಮ್” (“Nezen”) [Strong’s Hebrew # 5141]
(ಸ್ಟ್ರಾಂಗ್ಸ್ ಇಬ್ರಿ0ಯ ಸಂಖ್ಯೆ 5141) ನಿಂದ ಭಾಷಾಂತರಿಸಲಾಗಿದೆ.
ಅಂದರೆ “ಮೂಗುತಿ” ಮತ್ತು “ಓಲೆ” ಎರಡೂ ಹೇಳಬಹುದು.
ಆದರೆ ಇಲ್ಲಿನ ವಾಕ್ಯವನ್ನು ಅಭ್ಯಾಸ ಮಾಡುವಾಗ ನಮಗೆ ಸ್ಪಷ್ಟವಾಗುವುದೇನೆಂದರೆ
“ಮೂಗುತಿ”ಗಿಂತಲೂ “ಓಲೆ” ಎಂದು ಇಲ್ಲಿ ಸೂಚಿಸಲಾಗಿದೆ :
ಇದನ್ನು ಆಂಗ್ಲ ಮತ್ತು ತಮಿಳು ಸತ್ಯವೇದವನ್ನು ಹೋಲಿಸಿ ನೋಡಿದಾಗ ನಮಗೆ ಇನ್ನೂ ಚೆನ್ನಾಗಿ ಅರ್ಥವಾಗುತ್ತದೆ.

**ಆತನು ಹೇಳಿದ್ದಕ್ಕೆ ಅರ್ಥವೇನೆಂದರೆ -**
**ಯಾರಾರು ಪವಿತ್ರಾತ್ಮನಿಂದ ಕಿವಿಯನ್ನು ಹೊಂದಿದ್ದಾರೋ,**
**ಅವನು/ಅವಳು ಕೇಳಲಿ.**



## "ಬಳೆಗಳು"

ಇದು ದೇವರ ಸೇವೆಯನ್ನು ದೈವೀಕ ಅಧಿಕಾರದಿಂದ ಕೆಲಸ ಮಾಡಲು ದೊರಕುವ **ಅವಕಾಶವನ್ನು** ಸೂಚಿಸುತ್ತದೆ – ಏಕೆಂದರೆ ಕೈಗಳು ಕೆಲಸ ಅಥವಾ ಸೇವೆಯನ್ನು ಸೂಚಿಸುತ್ತದೆ.

ನಂತರ ನಾವು ಓದುವುದೇನೆಂದರೆ ರೆಬೆಕ್ಕಳ **ಮದುವೆಯ ಪ್ರಸ್ತಾಪವು ಖಚಿತವಾದ** ನಂತರ ಆಕೆಯು **ಮತ್ತಷ್ಟು ಉಡುಗೊರೆಗಳನ್ನು** ಪಡೆದುಕೊಳ್ಳುತ್ತಾಳೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಆದಿಕಾಂಡ 24:53**

*"ಆ ಮೇಲೆ ತಾನು ತಂದಿದ್ದ ಬೆಳ್ಳಿಬಂಗಾರದ ಒಡವೆಗಳನ್ನೂ ವಸ್ತ್ರಗಳನ್ನೂ ತೆಗೆದು ರೆಬೆಕ್ಕಳಿಗೆ ಕೊಟ್ಟನು. ಆಕೆಯ ಅಣ್ಣನಿಗೂ ತಾಯಿಗೂ ಸಹ ಬೆಲೆಯುಳ್ಳ ಉಡುಗೊರೆಗಳನ್ನು ಕೊಟ್ಟನು."*

ರೆಬೆಕ್ಕಳಿಗೆ ದೊರೆತ ಈ ಉಡುಗೊರೆಗಳು, ಕ್ರೈಸ್ತ ನಂಬಿಕೆಯಲ್ಲಿ ಮತ್ತು ವಾಕ್ಯದ ಜ್ಞಾನದಲ್ಲಿ ಬೆಳೆದ ನಂತರ ನಿರೀಕ್ಷೆಯುಳ್ಳ ಮದಲಗಿತ್ತಿ ವರ್ಗಕ್ಕೆ ದೇವರು ನೀಡುವ ಉಡುಗೊರೆಗಳನ್ನು ಸೂಚಿಸುತ್ತದೆ –

### 1. "ಬೆಳ್ಳಿ ಒಡವೆಗಳು"

ಅಮೂಲ್ಯವಾದ ದೇವರ **ಸತ್ಯವನ್ನು** ಬೆಳ್ಳಿಗೆ ಸೂಚಿಸಲಾಗಿದೆಯೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 12:6 →** *"ಯೆಹೋವನ ಮಾತುಗಳು ಯಥಾರ್ಥವಾದವುಗಳೇ; ಅವು ಏಳು ಸಾರಿ ಪುಟಕ್ಕೆ ಹಾಕಿದ ಚೊಕ್ಕಬೆಳ್ಳಿಯೋಪಾದಿಯಲ್ಲಿವೆ."*

ಹೌದು! ಸತ್ಯವೇದದಲ್ಲಿರುವ ಮಾತು ಮತ್ತು ವಾಕ್ಯಗಳು ತೆರೆಯಲ್ಪಟ್ಟಿದೆ ಮತ್ತು **ದೇವರ ದೈವೀಕ ಯೋಜನೆಯು** ಸತ್ಯವನ್ನು ಅರ್ಥಮಾಡಿಕೊಳ್ಳುವುದಕ್ಕೆ ಕೊಡಲ್ಪಟ್ಟಿದೆ ಇದೇ ಪಡೆದು ಕೊಂಡಂತಹ ಮೊದಲ ದೊಡ್ಡ ಉಡುಗೊರೆ!

## 2."ಬಂಗಾರದ ಒಡವೆಗಳು"

ಇದು "**ದೈವ ಸ್ವಭಾವದಲ್ಲಿ** ಪಾಲನ್ನು ಹೊಂದುವೆವು ಎಂಬ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನವನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಪೇತ್ರ 1:4 ➔** " ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗುಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ."

ಹೌದು! ಈ ಬಂಗಾರವು, "ಸಭೆ"ಯ ವರ್ಗಕ್ಕೂ ವಿಸ್ತಾರಗೊಂಡಿರುವ **ಮಹಾ ಪರಲೋಕದ ರಕ್ಷಣೆಯ** ಆಹ್ವಾನವನ್ನು ಸೂಚಿಸುತ್ತದೆ.

ಮತ್ತು ಇವುಗಳ ವಿವರಣೆಯನ್ನು ಅಭ್ಯಾಸ **# 17,18,19** ರಲ್ಲಿ ನೋಡಲಿದ್ದೇವೆ!!

## 3."ವಸ್ತ್ರಗಳು"

ಇದು ಪಾಪಗಳನ್ನು ಮುಚ್ಚಿಬಿಡುವಂತಹ "**ನೀತಿಯ** (ಧರ್ಮದ) **ವಸ್ತ್ರವನ್ನು**" ಸೂಚಿಸುತ್ತದೆ. ಮತ್ತು ಇದು ಈಗ "ಪರಲೋಕದ ಕೃಪಾಸನದ" ಬಳಿ ಹೋಗುವದಕ್ಕೆ ಧೈರ್ಯ ನೀಡುತ್ತದೆ ಮತ್ತು ಒಬ್ಬನನ್ನು(ಒಬ್ಬಳನ್ನು) ನೀತಿವಂತರೆಂದು ನಿರ್ಣಯ ಪಡಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆಶಾಯ 61:10 ➔** "ನಾನು ಯೆಹೋವನಲ್ಲಿ ಪರಮಾನಂದ ಪಡುವೆನು, ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವದು; ವರನು ಬಾಸಿಂಗವನ್ನು ಧರಿಸಿ ಕೊಳ್ಳುವಂತೆಯೂ ವಧುವು ತನ್ನನ್ನು ಆಭರಣಗಳಿಂದ ಅಲಂಕರಿಸಿಕೊಳ್ಳುವ ಹಾಗೂ ಆತನು ನನಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸಿ ಧರ್ಮವೆಂಬ ನಿಲುವಂಗಿಯನ್ನು ತೊಡಿಸಿದ್ದಾನಲ್ಲಾ."


ಹೌದು! **ವಸ್ತ್ರವು** ನೀತಿವಂತರೆಂಬ ನಿರ್ಣಯ ಹೊಂದುವ ದೇವರ ಕೃಪೆಯನ್ನು ಸೂಚಿಸುತ್ತದೆ ಮತ್ತು ಕಲ್ವಾರಿ ಶಿಲುಬೆಯಲ್ಲಿ ಯೇಸುವಿನ ಈಡುಬಲಿಯಿಂದ ಸುರಿದ ರಕ್ತದ ಮೂಲಕ ಪಾಪವನ್ನು ಮುಚ್ಚುತ್ತದೆ.

**ಆದ್ದರಿಂದ ಸಭೆಗೆ ಈ ಎಲ್ಲಾ "ಆತ್ಮೀಕ" ಉಡುಗೊರೆಗಳು ಪವಿತ್ರಾತ್ಮನ ಮೂಲಕ ದೊರೆಯುತ್ತದೆ.**
**ಎಲೀಯೆಜರನು ಪವಿತ್ರಾತ್ಮನಿಗೆ ಛಾಯೆಯಾಗಿದ್ದಾನೆ.**

ನಂತರ ನಾವು ಹೀಗೆ ಓದುತ್ತೇವೆ......

**ಆದಿಕಾಂಡ 24:54**

"ಈ ಮನುಷ್ಯನ ಜೊತೆಯಲ್ಲಿ ಹೋಗುವಿಯಾ ಎಂದು ಕೇಳಿದರು."



ಇದು ಕರ್ತನಾದ ಯೇಸುವಿನ ಮೇಲೆ ಸಭೆಯು ವರ್ಗವು ಇಟ್ಟಿರುವ **"ನಂಬಿಕೆ"** ಮತ್ತು **"ವಿಶ್ವಾಸ"**ವನ್ನು ಮತ್ತು ಏನೇ ಆದರೂ ಆತನ ಹೆಜ್ಜೆ ಜಾಡನ್ನು **ಹಿಂಬಾಲಿಸಲು** ಸಿದ್ಧವಾಗಿರುವುದನ್ನು ಸೂಚಿಸುತ್ತದೆ!

ಹೌದು! "ನೀವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ" (1 ಪೇತ್ರ 1:8)

ರೆಬೆಕ್ಕಳು ಹೆಚ್ಚು ಪರಿಚಯವಿಲ್ಲದ, ಯಾರೋ ಒಬ್ಬರ ಜೊತೆ ಹೋಗಲು ಹೇಗೆ ಗಂಡಾಂತರವಿದೆಯೋ ಹಾಗೆಯೇ ಸಭೆಯು ಯೇಸುವಿನ ಬಗ್ಗೆ ಗೊತ್ತಿಲ್ಲದೆ ಅಂದರೆ ಕರ್ತನಾದ ಯೇಸುವನ್ನು ಕಣ್ಣಾರೆ ನೋಡಿಲ್ಲವಾದ್ದರಿಂದ ಸಭೆಯ ಜೀವನವು ಗಂಡಾಂತರದಲ್ಲಿದೆ ಮತ್ತು ಸಭೆಯು ಉಳಿದಿರುವ ಜೀವಿತವನ್ನು ಸಮರ್ಪಿಸಬೇಕಾಗಿದೆ.

ನಂತರ ವಿಶೇಷವಾದ ಆರ್ಶೀವಾದವನ್ನು ಕುರಿತು ಓದಲಿದ್ದೇವೆ –

**ಆದಿಕಾಂಡ 24:60**

"ತಂಗಿಯೇ, ನಿನ್ನಿಂದ ಲಕ್ಷಾಂತರ ಸಂತಾನವಾಗಲಿ; ನಿನ್ನ ಸಂತಾನದವರು

ತಮ್ಮ ವೈರಿಗಳ ಪಟ್ಟಣಗಳನ್ನು ಸ್ವಾಧೀನಮಾಡಿಕೊಳ್ಳಲಿ ಎಂದು ಹೇಳಿ ಹರಸಿದರು."

ಇದೊಂದು ವಿಶೇಶವಾದ **ಆಶೀರ್ವಾದ!**

**ಇದರ ಅರ್ಥವೇನು?**

**ಒಂದು ಹೆಂಗಸಿಗೆ ಅಷ್ಟೊಂದು ಮಕ್ಕಳು ಹುಟ್ಟುಲು ಹೇಗೆ ಸಾಧ್ಯಾ?**

ಸ್ವಲ್ಪ ಊಹಿಸಿ ನೋಡಿರಿ!

ರೆಬೆಕ್ಕಳನ್ನು 0ಯಾರಿಗೆ ಸಾಂಕೇತಿಸಲಾಗಿದೆ ಎಂದು ನೋಡಿದಾಗ ಮಾತ್ರ ಒಬ್ಬನು ಈ ಆಶೀರ್ವಾದದ ಮಹತ್ವವನ್ನು ಅರ್ಥಮಾಡಿಕೊಳ್ಳಲು ಸಾಧ್ಯ–

ರೆಬೆಕ್ಕಳನ್ನು **ಸಭೆಗೆ** ಸಾಂಕೇತಿಸಲಾಗಿದೆ0ಯೆಂದು ನಾವು ಮೊದಲೇ ನೋಡಿದೆವು.

ಈ ಸಭೆ0ಯು ಕರ್ತನ ಜೊತೆ **ಮದಲಗಿತ್ತಿಯಾಗಿ** ಮಹಿಮೆ ಹೊಂದಬೇಕಾಗಿದೆ (**ಪ್ರಕಟನೆ** 22:17)

**ಆದರೆ ಇಷ್ಟೇ ಅಲ್ಲದೆ ಇನ್ನೂ ಇದೆ!**

ಆಕೆ0ಯು "ಎರಡನೆ ಆದಾಮನಿಗೆ" **ಎರಡನೆ ಹವ್ವಳಾಗ** ಬೇಕಾಗಿದೆ. (1 **ಕೊರಿಂಥದವರಿಗೆ** 15:45)

0ಯೇಸು ಮತ್ತು ಸಭೆ **ಇಬ್ಬರೂ** ಸೇರಿ **ಪುನರುತ್ಥಾನದಲ್ಲಿ** ಈ ಲೋಕದವರಿಗೆ ಜೀವವನ್ನು ಮತ್ತು ಆಶೀರ್ವಾದವನ್ನು ಕೊಡಲಿದ್ದಾರೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 22:17 →**"ಆತ್ಮನೂ ಮದಲಗಿತ್ತಿ0ಯೂ – ಬಾ ಅನ್ನುತ್ತಾರೆ. ಕೇಳುವವನು – ಬಾ ಅನ್ನಲಿ. ಬಾ0ಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರ0ಯವಿಲ್ಲದೆ ತೆಗೆದುಕೊಳ್ಳಲಿ."

ಹೌದು! ಈ ಲೋಕದ ಮನುಷ್ಯಜಾತಿ – **ಬಹು ಕೋಟಿ** ಜನರೇ "ಲಕ್ಷಾಂತರ" ಸಂತಾನವು!!

ಮತ್ತೆ **ಜ್ಞಾನೋಕ್ತಿ** 31 ರಲ್ಲಿ ಇದನ್ನೇ ಸೂಚಿಸಲಾಗಿದೆ

10ನೇ ವಾಕ್ಯದಿಂದ 31ನೇ ವಾಕ್ಯದವರೆಗೂ "ಗುಣವತಿ0ಯಾದ ಸತಿ"0ಯ ಬಗ್ಗೆ ಮಾತನಾಡುತ್ತದೆ.

ಇದು ಕ್ರಿಸ್ತನ ಮದಲಗಿತ್ತಿಯಾದ "ಸಭೆ"0ು ವರ್ಗವನ್ನು ಸೂಚಿಸುತ್ತದೆ.

ಮತ್ತೆ 28ನೇ ವಾಕ್ಯದಲ್ಲಿ ಹೀಗೆ ಓದುತ್ತೇವೆ–

**"ಮಕ್ಕಳು ಎದ್ದುನಿಂತು ಆಕೆ0ುನ್ನು ಧನ್ಯಳು ಎಂದು ಹೇಳುವರು"**

ಹೌದು! ಇದು ಈ ಲೋಕದ ಮನುಷ್ಯಕುಲವು ಪುನರುತ್ಥಾನ ಹೊಂದಿ "ಎದ್ದು ನಿಂತು" ಸಭೆ0ು ಮತ್ತು 0ುೇಸುವಿನ "ಮಕ್ಕಳಾಗುವರು" ಮತ್ತು

**ಅವರ ಸಂಖ್ಯೆ0ುು "ಲಕ್ಷಾಂತರ" ಅಥವಾ ಕೋಟಿಗಳು!**

ನಂತರ ನಾವು ಹೀಗೆ ಓದುತ್ತೇವೆ –

## ಆದಿಕಾಂಡ 24:61

**" ರೆಬೆಕ್ಕಳೂ ಆಕೆ0ು ದಾಸಿ0ುರೂ ಒಂಟೆಗಳ ಮೇಲೆ ಹತ್ತಿದವರಾಗಿ ಅಬ್ರಹಾಮನ ಸೇವಕನ ಹಿಂದೆ ಹೋದರು.**

**ಹೀಗೆ ಆ ಸೇವಕನು ರೆಬೆಕ್ಕಳನ್ನು ಕರಕೊಂಡು ಹೊರಟನು."**

ಹೌದು! **ಅವರು ಪ್ರ0ುಾಣ ಮಾಡಿ ಮನೆಗೆ ಹಿಂದಿರುಗುತ್ತಾರೆ!**

**ಇದು ಏನನ್ನು ಸೂಚಿಸುತ್ತದೆ?**

ಎಲೀಯೆಜರನ ಜೊತೆ ರೆಬೆಕ್ಕಳ "ಪ್ರ0ುಾಣವು" ಸಭೆ0ು "ಭೂ0ುಾತ್ರೆ"0ು **ಕಾಲವನ್ನು** ಸೂಚಿಸುತ್ತದೆ.

– ಅಂದರೆ ಈ **ಸುವಾರ್ತೆ 0ುುಗದ** ಕಾಲಾಧಿ0ುನ್ನು ಸೂಚಿಸುತ್ತದೆ

**ಹೌದು! ಇದು ಪರಲೋಕದ ಪರಮ ಕಾನಾನಿಗೆ ಪ್ರ0ುಾಣ ಮಾಡುವುದಾಗಿದೆ!**

ಮತ್ತು ಕೊನೆ0ುದಾಗಿ ಹೀಗೆ ಓದುತ್ತೇವೆ....

## ಆದಿಕಾಂಡ 24:62-67

**" ಅಷ್ಟರಲ್ಲಿ ಇಸಾಕನು ಲಹೈರೋಯಿ ಬಾವಿಗೆ ಹೋಗಿ ಬಂದಿದ್ದನು; ಕಾನಾನ್ ದೇಶದ ದಕ್ಷಿಣ ಸೀಮೆ0ುಲ್ಲಿ ವಾಸವಾಗಿದ್ದನು.**

**ಅವನು ಸಂಜೇವೇಳೆ0ುಲ್ಲಿ ಧ್ಯಾನ ಮಾಡುವದಕ್ಕೋಸ್ಕರ ಅಡವಿಗೆ ಹೋಗಿದ್ದಾಗ ಕಣ್ಣೆತ್ತಿ ನೋಡಲಾಗಿ ಒಂಟೆಗಳು ಬರುವದನ್ನು ಕಂಡನು. ರೆಬೆಕ್ಕಳು ಕಣ್ಣೆತ್ತಿ ಇಸಾಕನನ್ನು ನೋಡಿ ಒಂಟೆಯಿಂದ ಬೇಗ ಇಳಿದು – ನಮ್ಮನ್ನು ಎದುರುಗೊಳ್ಳುವದಕ್ಕೆ ಅಡವಿ0ುಲ್ಲಿ ನಡೆದು ಬರುವ ಆ ಮನುಷ್ಯನು 0ುಾರೆಂದು**

ಆ ಸೇವಕನನ್ನು ಕೇಳಿದಳು. ಅವನೇ ನನ್ನ ದಣಿ0ುಂದು ಅವನು ಹೇಳಿದಾಗ ಆಕೆ ಮುಸುಕುಹಾಕಿ ಕೊಂಡಳು. ಆ ಸೇವಕನು ತಾನು ಮಾಡಿದ ಕಾ0ುರ್ಗಳನ್ನೆಲ್ಲಾ ಇಸಾಕನಿಗೆ ತಿಳಿಸಿದನಂತರ ಇಸಾಕನು ಆಕೆ0ುನ್ನು ತಾಯಿ0ಾದ ಸಾರಳ ಗುಡಾರಕ್ಕೆ ಕರೆದುಕೊಂಡು ಹೋದನು. ಈ ರೀತಿ0ಾಗಿ ಅವನು ರೆಬೆಕ್ಕಳನ್ನು ವರಿಸಿದನು. ಆಕೆ ಅವನ ಹೆಂಡತಿ0ಾದಳು. ಅವನು ಆಕೆ0ುನ್ನು ಪ್ರೀತಿಸಿ ತನ್ನ ತಾಯಿ ಸತ್ತ ದುಃಖವನ್ನು ಶಮನಮಾಡಿಕೊಂಡನು..... ”

ಇದು ಸುವಾರ್ತೆ 0ುಗದ ಮುಕ್ತಾ0ುವನ್ನು ಮತ್ತು ನಮ್ಮ ಕರ್ತನಾದ 0ೇಸು ಕ್ರಿಸ್ತನ **ಎರಡನೆ0ು ಬರುವಿಕೆ**0ುನ್ನು ಮತ್ತು ಎರಡನೆ0ು ಬರುವಿಕೆ0ು ನಂತರದಲ್ಲಿ **ಸಭೆ0ುು**

**.....ಮೊದಲ ಪುನರುತ್ಥಾನದಲ್ಲಿ**

ಆತನನ್ನು ಎದುರು ಗೊಳ್ಳುವುದನ್ನು ಸೂಚಿಸುತ್ತದೆ ಹಾಗೂ **ಇದನ್ನು "ಕ್ರಿಸ್ತನಲ್ಲಿ ಸತ್ತವರ" ಪುನರುತ್ಥಾನ ಎಂಬುದಾಗಿ** (1 ಥೆಸಲೋನಿಕದವರಿಗೆ 4:16) ಹೇಳಲಾಗಿದೆ. ಈ ವಿಷ0ುಗಳ ಆಳವಾದ ವಿವರಣೆಗಳನ್ನು ಮುಂದಿನ ತರಗತಿಗಳಲ್ಲಿ ಅಭ್ಯಾಸ ಮಾಡಲಿದ್ದೇವೆ.

ಇಲ್ಲಿ ನಾವು ಸಲಹೆ ಕೊಡುವುದೇನೆಂದರೆ ಹೇಗೆ ಮದುಮಗನು ಆತನ ಮದಲಗಿತ್ತಿಯ ಅಂದವನ್ನು ನೋಡಲು ಮುಸುಕನ್ನು ಎತ್ತುತ್ತಾನೋ ಹಾಗೆ0ೇ ಇಸಾಕನು ರೆಬೆಕ್ಕಳ **ಅಂದವನ್ನು** ಪರೀಕ್ಷಿಸಲು ಆಕೆ0ು ಮುಸುಕನ್ನು ಎತ್ತಿ ನೋಡಿರ ಬಹುದು! ಇದೇ ರೀತಿ ಕರ್ತನು ಸಹ ಆತನ ಮದುಮಗಳಲ್ಲಿ ಅಂದವಿರಬೇಕೆಂದು ಎದುರು ನೋಡುವುದನ್ನು ಸೂಚಿಸುತ್ತದೆ!

**ಆದರೆ 0ೇಸು 0ಾವ ರೀತಿ0ಾದ ಅಂದವನ್ನು ಎದುರು – ನೋಡುತ್ತಾರೆ?**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಪೇತ್ರ 3:3,4**

“ ಜಡೆಹೆಣೆದುಕೊಳ್ಳುವದು ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವದು ವಸ್ತ್ರಗಳನ್ನು ಧರಿಸಿಕೊಳ್ಳುವದು ಈ ಮೊದಲಾದ ಹೊರಗಣ ಶೃಂಗಾರವೇ

ನಿಮ್ಮ ಅಲಂಕಾರವಾಗಿರಬಾರದು."
" ಸಾತ್ವಿಕವಾದ ಶಾಂತ ಮನಸ್ಸು ಎಂಬ ಒಳಗಣ ಭೂಷಣವು ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ. "

ಹೌದು! ಈ ರೀತಿ0ಯಾದ ಅಂದವನ್ನು ಕರ್ತನು ಎದುರು ನೋಡುತ್ತಾನೆ
– **ಪವಿತ್ರತೆ** ಮತ್ತು **ಪರಿಶುದ್ಧತ್ವ,**
ಇದು ಅನೇಕ ವಿಧವಾದ ಕಷ್ಟಾನುಭವಗಳ ಮೂಲಕ ಮತ್ತು ತನ್ನನ್ನೇ ತಾನೇ ನಿರಾಕರಿಸಿಕೊಳ್ಳುವುದರ ಮೂಲಕ ಹೊಂದಿಕೊಳ್ಳಬಹುದು
ಮತ್ತು ಬೆಳೆಸಿಕೊಳ್ಳಬಹುದು ಮತ್ತು ಆಕೆ0ಯು (**ಸಭೆ0ಯು**)
"ಸದಾಕಾಲವೂ ಕರ್ತನ ಜೊತೆಯಲ್ಲಿರುವರು" (1 **ಥೆಸಲೋನಿಕದವರಿಗೆ** 4:17)

ಹೌದು! ಹೇಗೆ ಇಸಾಕ ಮತ್ತು ರೆಬೆಕ್ಕಳ ಪ್ರೇಮ ಕಥೆ ಮದುವೆ0ಯಲ್ಲಿ ಮುಗಿಯಿತೋ
– ಅದೇ ರೀತಿ 0ಯೇಸು
ಮತ್ತು ಸಭೆ0ಯ ಪ್ರೇಮ ಕಥೆ0ಯು **0ಯಜ್ಞದ ಕುರಿ0ಯಾದಾತನ ಭವ್ಯವಾದ ಮದುವೆ0ಯಲ್ಲಿ** ಮುಗಿ0ಯುತ್ತದೆ! **ಪ್ರಕಟನೆ** 19:7

**ಆದ್ದರಿಂದ ಹಳೆಯ ಒಡಂಬಡಿಕೆಯ ನಿದರ್ಶನ ಮತ್ತು ಛಾಯೆಗಳನ್ನು ನೋಡಿದ್ದೇವೆ.**
**ಇವು ದೊಡ್ಡ ದೈವೀಕ ಸತ್ಯಗಳನ್ನು ಪ್ರತಿಫಲಿಸುತ್ತವೆ ಹಾಗೂ ನಮಗೆ ಅವುಗಳನ್ನು ಕಲಿಸಿಕೊಡುತ್ತವೆ!!**

ಮತ್ತು ಈ **ವಿಧವಾದ** ಅನೇಕ **ಛಾ0ಯೆಗಳು** ಮತ್ತು **ನಿದರ್ಶನಗಳು**
**ಹಳೆ0ಯ ಒಡಂಬಡಿಕೆ ಪುಸ್ತಕದಲ್ಲಿವೆ ಅವು 0ಯಾವುದೆಂದರೆ** –

ಇಸ್ರಾ0ಯೇಲ್ಯರು ಮತ್ತು ಅವರ ದಾಸತ್ವ ಮತ್ತು ಮಧ್ಯಸ್ಥನಾದ ಮೋಶೆ0ಯ ಮೂಲಕ ಐಗುಪ್ತ್ಯದಿಂದ ಬಿಡುಗಡೆ ಮತ್ತು ಅವರ ವಿಮೋಚನೆ ನಂತರ ಕಾನಾನಿಗೆ ಪ್ರ0ಯಾಣ.

ಸೊಲೊಮೋನನ ಪರಮಗೀತ (ಸ್ತೋತ್ರಗಳು ಎಂದೂ ಸಹ ಕರೆ0ುಲಾಗುತ್ತದೆ)

ಇದು ಕರ್ತನ ಮತ್ತು ಆತನ ಸಭೆ0ು ಸಂಬಂಧವನ್ನು ತೋರಿಸುತ್ತದೆ.

ದೇವದರ್ಶನ ಗುಡಾರ ಮತ್ತು ಅದರ ಯಜ್ಞಗಳು (ಇಬ್ರಿ0ು 9:9,10) ಮತ್ತು ಅದು ಏನನ್ನು ಸೂಚಿಸುತ್ತದೆ.

ಧರ್ಮಶಾಸ್ತ್ರ ಮತ್ತು ಅದರ ವೈಶಿಷ್ಟ್ಯಗಳಾದ ಪಸ್ಕಹಬ್ಬ ಜೂಬಿಲಿ.....ಮತ್ತು ಇನ್ನೂ, ಇನ್ನೂ ಅನೇಕಾನೇಕ ಆತ್ಮೀಕ ಸತ್ಯಗಳಾದ ಒಡವೆ (ಆಭರಣ)ಗಳು ಸತ್ಯವೇದದ ಹಳೆ0ು ಒಡಂಬಡಿಕೆ0ುಲ್ಲಿ ಅಡಕವಾಗಿದೆ.

– ಅವುಗಳನ್ನು ಕುರಿತು ಸ್ವಲ್ಪ ಸ್ವಲ್ಪವಾಗಿ ಮುಂದಿನ ತರಗತಿಗಳಲ್ಲಿ ಅಭ್ಯಾಸ ಮಾಡಲಿದ್ದೇವೆ.

## "ಆಮೆನ್"



For Private Circulation Only

NOT FOR SALE




For more Subjects contact: MESSENGERS OF CHRIST  E-mail: thekingdom1_6@yahoo.com